# ಜನಪದ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೬ ಮಾರ್ಚ್ -೨೦೧೬ ಸಂಚಿಕೆ - ೮

## ಬಂಡವಾಳವೇನೊ ಹರಿದು ಬಂತು ಸಮಾಜದ ಪಾಡೇನು?

*

## ಧರ್ಮದ ನೈಜ ಸ್ವರೂಪ

*

## ಬದುಕನು ಕಟ್ಟುವ ಅನುಭವಗಳು

*

## ವಿಜ್ಞಾನಯುಗದಲ್ಲಿ ಸರ್ವೋದಯ ಅತಿ ಆದರ್ಶವಾದಿಯಲ್ಲ

# ಜನಪದ ವಿಚಾರದಲ್ಲಿ

ಮಾರ್ಚ್ - ೨೦೧೬

**೧) ಬಂಡವಾಳವೇನೊ ಹರಿದು ಬಂತು ಆದರೆ ಸಮಾಜದ ಪಾಡೇನು? ಪುಟ– ೩–೫**

ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ದೇಶವಿದೇಶಗಳಿಂದ ಬೃಹತ್ ಕಂಪನಿಗಳು ಬರುತ್ತಿವೆ. ಬಹುದೊಡ್ಡ ಪ್ರಮಾಣದಲ್ಲಿ ಬಂಡವಾಳ ಹರಿದುಬರುತ್ತಿದೆ. ಅದರಿಂದ ಉಂಟಾಗುತ್ತಿರುವ ಸಾಮಾಜಿಕ ಸಮಸ್ಯೆಗಳತ್ತ ಗಮನಸೆಳೆಯುತ್ತದೆ ಈ ಲೇಖನ.

**– ಸುರೇಂದ್ರ ಕೌಲಗಿ**

**೨) ಧರ್ಮದ ನೈಜ ಸ್ವರೂಪ ಪುಟ – ೬–೧೧**

ಜಗತ್ತಿನಲ್ಲಿ ಇಂದು ಧರ್ಮಗಳ ವಿಷಯದಲ್ಲಿ ಕೋಲಾಹಲ ಉಂಟಾಗಿದೆ. ಜನರು ಭಯಭೀತರಾಗಿದ್ದಾರೆ ಧರ್ಮದ ನಿಜಾರ್ಥವನ್ನು ಜನಸಾಮಾನ್ಯರು ಅರ್ಥ ಮಾಡಿಕೊಂಡಾಗ ಧರ್ಮಗಳ ಕೋಲಾಹಲ ನಿಲ್ಲುವುದು. ಆ ನಿಟ್ಟಿನತ್ತ ಈ ಲೇಖನ ಸಹಕಾರಿಯಾಗಿದೆ.

**– ವಿನೋಬಾ**

**೩) ಸಾಧನೆಗೆ ಭಾಷೆಯ ಮಿತಿಯಿಲ್ಲ ಪುಟ – ೧೨–೧೩**

ಭಾಷೆಯ ಮಿತಿಯನ್ನು ದಾಟಿ ಮಾಡಿದ ಸಾಧನೆಯ ವೃತ್ತಾಂತ ಈ ಲೇಖನದಲ್ಲಿದೆ.

**– ಸುನಂದ ರಂಗನಾಥಸ್ವಾಮಿ**

**೪) ವಿಜ್ಞಾನಯುಗದಲ್ಲಿ ಸರ್ವೋದಯ ಅತಿ ಆದರ್ಶವಾದಿಯಲ್ಲ. ಪುಟ – ೧೪–೧೭**

ಇಂದಿನ ವಿಜ್ಞಾನಯುಗದಲ್ಲಿ ಸರ್ವೋದಯ ಸಿದ್ಧಾಂತ ಹೇಗೆ ಪ್ರಸ್ತುತವಾಗಿದೆ ಎಂಬುದನ್ನು ತಿಳಿಸುತ್ತದೆ ಈ ಲೇಖನ

**– ವಿನೋಬ**

**೫) ಬದುಕನು ಕಟ್ಟುವ ಅನುಭವಗಳು ಪುಟ – ೧೮–೨೫**

ಜೀವನ ಅನುಭವಗಳ ಮೂಟೆ, ಅವು ಜೀವನವನ್ನು ಸಾರ್ಥಕಗೊಳಿಸಲು ಹೇಗೆ ನೆರವಾಗುತ್ತವೆ ಎಂಬುದಕ್ಕೆ ಈ ಲೇಖನ ನಿದರ್ಶನ

**– ಡಾ॥ ಕೆ ಜಗದೀಶ್ ಪೈ**

**೬) ಸರ್ವೋದಯ ಆಂದೋಲನದ ಮುನ್ನಡೆ ಪುಟ –೨೬–೨೭**

**೭) ಖಾದಿ ವಿಚಾರ ಪುಟ – ೨೮**

**೮) ಜನಪದ ನಿಲಯದ ಅಂತರಂಗದಲ್ಲಿ – ೧೪೨ ಪುಟ – ೨೯–೩೨**

## ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮಾರ್ಚ್ - ೨೦೧೬
ಸಂಪುಟ - ೧೬
ಸಂಚಿಕೆ - ೮

---

ಸಂಪಾದಕ
ಸುರೇಂದ್ರ ಕೌಲಗಿ

---

**ಸಲಹಾ ಸಮಿತಿ**
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

---

**ಚಂದಾ ವಿವರ**
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-



**ಸಂಪರ್ಕ ವಿಳಾಸ**
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

---

ಫೋನ್ : 9141700812
08236 - 299854
email :
janapada@yahoo.com
Web: janapada.org


# ಅ ಬ ಲೆ

ಅಪ್ಪ ನಿನಗೆ ಮಗಳೇ ಬೇಕಾ?
ಮರೆಯಾಯಿತೆ? ನಿನ್ನ ಮಮಕಾರ
ತಾತ ನಿನಗೂ ಮೊಮ್ಮಗಳೇ ಬೇಕಾ?
ಬೆಂದು ಪುಡಿಯಾಯಿತೆ?
ನಿನ್ನಾನುಭುವದ ಮೂಟೆ
ಗುರುವೆ ನಿಮಗೂ ನಿಮ್ಮ ಶಿಷ್ಯೆಯೇ ಬೇಕಾ?
ಆರಿತೆ ನಿನ್ನ ಬೆಳಕಿನ ದೀಪ?
ಸಹೋದರರೆ ನಿಮಗೂ ನಿಮ್ಮಕ್ಕ-
ತಂಗಿಯೇ ಬೇಕಾ?
ಎಲ್ಲಿ ನಿಮ್ಮಸಲುಗೆ-ಪ್ರೀತಿ
ನನಗೂ ಅಪ್ಪನೊಡನಾಡಬೇಕು
ತಾತನೊಂದಿಗನುಭವದ ಕಥೆ ಕೇಳಬೇಕು
ಅಣ್ಣ-ತಮ್ಮನೊಂದಿಗೆ ಪ್ರೀತಿಯನ್ನುಣಬೇಕು
ಗುರುವಿನೊಂದಿಗೆ ಅರಿತು ಕಲಿಯಬೇಕು
ಎಂಬ ಆಸೆಯಿದೆ-ಹಂಬಲವಿದೆ
ನಾನು ನಿಮ್ಮವಳೆ-ಮನುಷ್ಯಳೆ
ಹೆಣ್ತನವೆ ನನಗೆ ಮುಳುವಾಯಿತೆ?
ಸಂಬಂಧಗಳೆಲ್ಲಾ ಹಳಸಿ ಬೆಲೆಯಿಲ್ಲದಾಗಿ
ಕಾಮದ ಕಣ್ಣುಗಳು ಹೆಣ್ತನವ ಕಸಿಯಲು
ಹಾತೊರೆದು ಮುಗ್ಧ
ಜೀವವೆಂಬುದನ್ನು ಮರೆತು
ಹಸಿಯ ಮಾಂಸವ ರಣಹದ್ದು
ಕಿತ್ತು ತಿನ್ನುವಂತೆ
ನನ್ನ ಹೆಣ್ತನವನ್ನು ಜೊತೆಗೆ ನನ್ನ ಜೀವನವನ್ನೆ
ಕಿತ್ತು ತಿಂದಿರಲ್ಲಾ ಯಾರೊಡನೇಳಲಿ
ನನ್ನ ನೋವು ಹತಾಶೆಯ.
ಬಾಳುವ ಜೀವವನ್ನು ಅರಳುವ
ಹೂವನ್ನು ಹೊಸಕಿದಂತೆ
ಕ್ಷಣಮಾತ್ರದಲ್ಲಿ ಜೀವಂತ ಶವ ಮಾಡಿದಿರಲ್ಲ
ನಾನೊಬ್ಬಳೇನು ಮಾಡಲಿ
ಮರೆಯದಿರಿ ಹೆಣ್ತನವ ನಮ್ಮೊದಯಕ್ಕೆ ಕಾರಣ
ಬದುಕಲು ಬಿಡಿ, ಅರಳುವ ಹೂ ಅರಳಲಿ ಬಿಡಿ
ನನ್ನುದರ ನೋವು ನನಗೆ ಇರಲಿ
ಹತಾಶೆಯೊಂದಿಗೆ ...ಇಂತಿ ಅಬಲೆ

-ಮಹದೇವ ಕೆ. ಪಿ (ಸಂವಾದ ಸಾಭಾರ)

# ಚಿಂತನೆಗೊಂದು ಸಂಗತಿ

'ಕರ್ನಾಟಕದಲ್ಲಿ ಬಂಡವಾಳ ಹೂಡಿ' ಎಂಬ ಕೈಗಾರಿಕೋದ್ಯಮಿಗಳ ಸಮಾವೇಶ ಅತ್ಯೋತ್ಸಹದಿಂದ ಮುಗಿದಿದೆ. ೩.೮ ಲಕ್ಷ ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯ ಸುನಾಮಿ ಕರ್ನಾಟಕವನ್ನು ಅಪ್ಪಳಿಸಿದೆ. ೬.೭ ಲಕ್ಷ ಉದ್ಯೋಗಗಳ ಸೃಷ್ಟಿ ಆಗಲಿದೆ. ಯಾರು ತಮ್ಮ ಬಳಿ ಕನಸ್ಸಿದೆ ಎಂದು ಹೆಳುತ್ತಾರೊ ಅಂತವರಿಗೆ ರೆಕ್ಕೆಗಳನ್ನು ಹಚ್ಚಿ ಹಾರುವಂತೆ ಮಾಡುವದು ತನ್ನ ಜವಾಬ್ದಾರಿಯೆಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದ್ದಾರೆ. ಸುಮಾರು ೩೦೦೦ ಎಕರೆ ಭೂಮಿ ಕೈಗಾರಿಕರಣಕ್ಕಾಗಿ ಮೀಸಲಿಡಲ್ಪಡುತ್ತಿದೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕೈಗಾರಿಕೋದ್ಯಮಿಗಳು ಕರ್ನಾಟಕಕ್ಕೆ ಧಾವಿಸಲಿದ್ದಾರೆ. ಅತ್ತ ಕೇಂದ್ರ ಸರ್ಕಾರದ 'ಮೇಕ್ ಇನ್ ಇಂಡಿಯಾ' ಎಂಬ ಯೋಜನೆಯಿಂದಾಗಿ ಗಂಗಾ ಪ್ರವಾಹದಂತೆ ಹರಿದು ಬರುತ್ತಿರುವ ವಿದೇಶಿ ಬಂಡವಾಳ ಹಾಗೂ ಇತ್ತ ರಾಜ್ಯಗಳಲ್ಲಿಯ ಕೈಗಾರಿಕರಣದ ಭರಾಟೆ ಎರಡೂ ಸೇರಿ ಸಮಾಜದಲ್ಲಿ ಅಲ್ಲೋಲ್ಲಕಲ್ಲೋಲ್ಲ ಉಂಟಾಗುತ್ತಿದೆ. ಭೌತಿಕ ಪ್ರಗತಿ ಮತ್ತು ಧನ ಸಂಪಾನೆಗಳೇ ಜನರ ಧ್ಯೇಯ ವಾಕ್ಯಗಳಾಗುವಂತೆ ಅನಿಸುತ್ತಿದೆ. ಎಲ್ಲ ಆದರ್ಶಗಳು, ಮೌಲ್ಯಗಳು ಮಾಯವಾಗುತ್ತಿರುವಂತೆ ತೋರುತ್ತಿದೆ. ಗ್ರಾಮೀಣಾಭೀವೃದ್ಧಿಯ ವಿಚಾರ ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿರುವಂತೆ ತೋರುತ್ತಿದೆ. ಶಿಕ್ಷಣ ಕೈಗಾರಿಕಾಮುಖಿ ಮತು ಧನಸಂಪಾದನಾಮುಖಿಯಾಗುತ್ತಿದೆ ಎಲ್ಲ ಪ್ರಕಾರದ ಆದರ್ಶಗಳು ಪೊಳ್ಳೆಂದೆನ್ನಿಸುತ್ತಿದೆ ಆಧ್ಯಾತ್ಮಿಕ ವಿಚಾರಗಳು ಅರ್ಥವಿಹೀನಂದೆನಿಸುತ್ತಿದೆ. ಸಾಹಿತ್ಯ ಮತ್ತು ಕಾವ್ಯಗಳು ತಮ್ಮ ಹೃದಯವಂತಿಕೆ ಕಳೆದುಕೊಳ್ಳುತ್ತಿವೆ ಎಂದು ಭಾಸವಾಗುತ್ತಿದೆ. ಸಾಹಿತ್ಯ ತನ್ನ ಮೂಲ ಉದ್ದೇಶವನೇ ಕಳೆದುಕೊಳ್ಳುತ್ತಿದೆ ಎಂದು ಭೀತಿ ಉಂಟಾಗುತ್ತಿದೆ. ಇಡೀ ಜೀವನವೆ ಖಾಲಿಖಾಲಿ ಮತ್ತು ಪೊಳ್ಳೆಂದೆನಿಸುತ್ತಿದೆ. ಜೀವನ ಶುಶ್ಕ ಎಂದೆನಿಸುತ್ತಿದೆ. ಯಾವ ಬಗೆಯ ಮೌಲಿಕ ಪ್ರಯತ್ನಕ್ಕೂ ಪ್ರೇರಣೆ ಇಲ್ಲವಾಗಿದೆ. ಇಂಥ ನೀರಸಮಯ ಸಮಾಜದಲ್ಲಿ ಹುಟ್ಟುವ ಮತ್ತು ಬೆಳೆಯುವ ಮಕ್ಕಳ ಭವಿಷ್ಯ ಎಂಥ ಘೋರವಾಗಿರುತ್ತದೆಂದು ಯೋಚಿಸಿದರೆ ಭಯವಾಗುತ್ತದೆ. ಕೈಗಾರಿಕರಣದ ಸುನಾಮಿಯಿಂದ ಹೇಗೆ ಪಾರಾಗಬಹುದೆಂಬುದೇ ಈ ಕಾಲದ ಚಿಂತನೆಯಾಗಬೇಕು.

# ಬಂಡವಾಳವೇನೋ ಹರಿದು ಬಂತು. ಆದರೆ ಸಮಾಜದ ಪಾಡೇನು?

– ಸುರೇಂದ್ರ ಕೌಲಗಿ

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕೈಗಾರಿಕೋದ್ಯಮಿಗಳ ಸಮಾವೇಶದಲ್ಲಿ ಪಾಲ್ಗೊಂಡಿದ್ದ ವಿವಿಧ ಬಗೆಯ ಕೈಗಾರಿಕೋದ್ಯಮಿಗಳಿಂದ ಲಕ್ಷಾಂತರ ಕೋಟಿ ರೂಪಾಯಿಗಳ ಬಂಡವಾಳ ಹರಿದು ಬಂದಿದೆ. ಇತ್ತೀಚೆಗೆ ಮುಂಬೈಯಲ್ಲಿ ನಡೆದ ಮೇಕ್-ಇನ್-ಇಂಡಿಯಾ ಸಪ್ತಾಹದಲ್ಲಿ ಭಾಗವಹಿಸಿದ್ದ ದೇಶಗಳಿಂದ ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ೯,೭೦೦ ಕೋಟಿ ಹೂಡಿಕೆ ನಿರೀಕ್ಷಿಸಲಾಗಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ವಿವಿಧ ಬಗೆಯ ಕೈಗಾರಿಕೆಗಳು ತಲೆಯೆತ್ತಲಿವೆ. ಗ್ರಾಮಾಂತರ ಪ್ರದೇಶದಿಂದ ವಲಸೆ ಬಂದ ಯುವಕರಿಗೆ ಉದ್ಯೋಗವಕಾಶಗಳು ದೊರೆಯಲಿವೆ. ಕೃಷಿಯಲ್ಲಿತೊಡಗುವುದಕ್ಕಿಂತ ಕೈಗಾರಿಕೆಗಳಲ್ಲಿ ಕಾರ್ಮಿಕರಾಗಿ ದುಡಿಯುವದು ಹೆಚ್ಚು ಲಾಭಕರ ಮತ್ತು ಹಿತಕರ ಎಂಬ ಭಾವನೆ ಯುವಕರಲ್ಲಿ ಮೊಳೆಯಲಿದೆ. ಅವರ ಈ ಭಾವನೆಗೆ ಇಂಬು ಕೊಡುವಂತೆ ಕೃಷಿಭೂಮಿ ಕೈಗಾರಿಕೆಗಳಿಗೆ ಮತ್ತು ಸ್ಮಾರ್ಟ್ ಸಿಟಿಗಳ ಸ್ಥಾಪನೆಗೆ ಮೀಸಲಾಗುತ್ತಿದೆ. ಕೇಂದ್ರ ಸರ್ಕಾರದಿಂದಲೂ ಕೈಗಾರಿಕರಣದ ದುಂಧುಬಿ, ರಾಜ್ಯ ಸರ್ಕಾರಗಳಿಂದಲ್ಲೂ ದುಂಧುಬಿ. ಈ ಪ್ರಕ್ರಿಯೆ ಎಷ್ಟು ಮುಂದುವರೆದಿದೆ ಎಂದರೆ, ಜಿಲ್ಲಾ ಮಟ್ಟಗಳಲ್ಲಿಯೂ ಕೈಗಾರಿಕೋದ್ಯಮಿಗಳ ಸಮಾವೇಶ ನಡೆಯುತ್ತಿದೆ. ತಮ್ಮತಮ್ಮ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲಕರ ಪರಿಸ್ಥಿತಿ ಇದೆ ಎಂಬುದಾಗಿ ಜಿಲ್ಲಾ ನಾಯಕರು ಘೋಷಿಸುತ್ತಾರೆ. ಕೈಗಾರಿಕೋದ್ಯಮಿಗಳಿಗೆ ಕೈಗಾರಿಕೆ ಸ್ಥಾಪಿಸಲು ಆಹ್ವಾನ ನೀಡುತ್ತಾರೆ. ದೇಶದ ತುಂಬೆಲ್ಲ ಕೈಗಾರಿಕಾ ಕ್ರಾಂತಿಯ ಸದ್ದು ಮೊಳಗುತ್ತಿದೆ. ಭಾರತ ದೇಶ ಜಗತ್ತಿನಲ್ಲಿಯೆ ಅತಿ ರಭಸದಿಂದ ಮುಂದುವರೆಯುತ್ತಿರುವ ಹಾಗೂ ಪರೋಕ್ಷವಾಗಿ ಬಂಡವಾಳ ಹೂಡಿಕೆಗೆ ಬಹು ಪ್ರಶಸ್ತ ದೇಶವಾಗಿದೆ ಎಂದೂ ಘೋಷಿಸಲಾಗುತ್ತಿದೆ. ವಿದೇಶಿ ಕಂಪನಿಗಳಿಗೆ ಬಂಡವಾಳ ಹೂಡಲು ಅನುಕೂಲವಾಗುವಂತೆ ದೇಶದ ಕೈಗಾರಿಕಾ ಸ್ಥಾಪನೆಯ ಲೈಸನ್ಸ್ ನಿಯಮಾವಳಿಗಳನ್ನು ಹಾಗೂ ಭೂಒಡೆತನದ ನಿಯಮಾವಳಿಗಳನ್ನು ಸಡಿಲಗೊಳಿಸಲಾಗುತ್ತಿದೆ. ಕೈಗಾರಿಕೆಗಳ ಬೆಳವಣಿಗೆಗೆ ಅಗತ್ಯವಾದ ಹೆದ್ದಾರಿಗಳು, ರೈಲುಮಾರ್ಗಗಳು, ವಿಮಾನ ನಿಲ್ದಾಣಗಳು ಮತ್ತು ಬಂದರಗಳು ಮುಂತಾದವುಗಳ ನಿರ್ಮಾಣ ಮಾಡುತ್ತಾ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡೆಸುವ ಕಾರ್ಯ ಭರದಿಂದ ಸಾಗಿದೆ. ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲವಾಗಲೆಂದು ಕಾಡುಗಳನ್ನು ಕಡಿಯಲಾಗುತ್ತಿದೆ. ಪಶ್ಚಿಮ ಘಟ್ಟದಂಥ ವೈವಿಧ್ಯಜೀವಿ ಪ್ರದೇಶವನ್ನು ಸಹ ಆಕ್ರಮಿಸಿಕೊಳ್ಳಲಾಗುತ್ತಿದೆ. ಹಿಮಾಲಯದ ತಪ್ಪಲಿನಲ್ಲಿರುವ ರಾಜ್ಯಗಳ ಕೈಗಾರಿಕಾ

ಅಭಿವೃದ್ಧಿಗಾಗಿ ಅಲ್ಲಿಯು ಸಹ ಅರಣ್ಯ ನಾಶಮಾಡಲಾಗುತ್ತಿದೆ ಮತ್ತು ಅಲ್ಲಿಯ ಪರ್ವತಗಳನ್ನು ಕೊರೆಯಲಾಗುತ್ತಿದೆ. ಕೈಗಾರೀಕರಣದ ಭರಾಟೆಯಲ್ಲಿ ಹವಾಮಾನದಲ್ಲಿಯ ಬದಲಾವಣೆಯ ಬಗ್ಗೆ ಏಳ್ಳಷ್ಟೂ ಯೋಚನೆ ಇಲ್ಲವಾಗಿದೆ. ಅತಿವೃಷ್ಠಿ ಮತ್ತು ಅನಾವೃಷ್ಠಿ ಸಹಜವಾಗುತ್ತಿರುವ ಈ ಕಾಲದಲ್ಲಿ ಅವುಗಳ ಕಾರಣದ ಶೋಧನೆಗೆ ಕಿಂಚಿತ್ತೂ ಸಮಯವಿಲ್ಲವಾಗಿದೆ. ಬಂಡವಾಳ ಹರಿದು ಬರುತ್ತಿರುವ ಇಂದಿನ ಸನ್ನಿವೇಶದಲ್ಲಿ ಪ್ರಕೃತಿಯ ವಿನಾಶದ ಬಗ್ಗೆ ಯೋಚನೆ ನಡೆದಿದೆಯೇ? ಬಂಡವಾಳವೇನೋ ಹರಿದು ಬಂತು. ಆದರೆ ಪ್ರಕೃತಿ ವಿನಾಶವನ್ನು ತಡೆಯುವವರು ಯಾರು?

ಬಂಡವಾಳ ಹೂಡಿಕೆಯಿಂದಾಗಿ ಬಹುತೇಕ ಜನರ ಕೈಯಲ್ಲಿ ಬಹಳಷ್ಟು ದೊಡ್ಡ ಪ್ರಮಾಣದಲ್ಲಿ ಹಣ ಹರಿದಾಡುತ್ತಿದೆ. ಇನ್ನು ಮುಂದೆ ಸಮಾಜದಲ್ಲಿ ಹಣಕ್ಕೆ ಮಾತ್ರ ಪ್ರಾಧಾನ್ಯತೆ ದೊರೆಯುವ ಮತ್ತು ಹಣವಿಲ್ಲದಿದ್ದರೆ ಒಂದು ತೃಣವನ್ನೂ ನೀವು ಎತ್ತಿ ಇಡಲಾರರಿ ಎಂಬ ಪರಿಸ್ಥಿತಿ ನಿರ್ಮಾಣ ವಾಗುತ್ತಿರುವದು ಗೋಚರಿಸುತ್ತಿದೆ. ಆದ್ದರಿಂದ ಯಾವುದೇ ಬಗೆಯ ಆದರ್ಶದ ಮಾತುಗಳು ಪೊಳ್ಳೆಂದೂ ಆದರ್ಶದ ಕೆಲಸಕಾರ್ಯಗಳು ಅರ್ಥವಿಹೀನ ಎಂದೂ ಅನಿಸುತ್ತಿದೆ. "ಸಮಾಜಕ್ಕೆ ಅಗತ್ಯವಾದ ಎಲ್ಲ ಕೆಲಸಕಾರ್ಯಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಮಾಡುತ್ತಿವೆ. ಆದ್ದರಿಂದ ವ್ಯಕ್ತಿಗಳ, ಸಂಘ-ಸಂಸ್ಥೆಗಳ, ಪ್ರಯತ್ನಕ್ಕೆ ಅವಕಾಶವಿಲ್ಲ ಹಾಗೂ ಅಗತ್ಯವೂ ಇಲ್ಲ ಎಂಬ ಪರಿಸ್ಥಿತಿ ಉಂಟಾಗುತ್ತಿದೆ. ಎಲ್ಲ ಬಗೆಯ ಕಲೆ, ಸಾಹಿತ್ಯ, ಪುರಸ್ಕಾರ ಹಣದ ಪ್ರಭಾವಕ್ಕೆ ಒಳಗಾಗಿಯೇ ರೂಪಿತಗೊಳ್ಳುತ್ತಿವೆ ಎಂಬ ವಾತಾವರಣ ನಿರ್ಮಾಣವಾಗುತ್ತಿರುವುದು ಅನುಭವಕ್ಕೆ ಬರುತ್ತಿದೆ." ಎಲ್ಲ ಬದಲಾವಣೆಗೆ ಮತ್ತು ಪುರೋಭಿವೃದ್ಧಿಗೆ ಕಾರಣವಾಗುವ ಶಿಕ್ಷಣಕ್ಷೇತ್ರ ಸಂಪೂರ್ಣವಾಗಿ ಕೈಗಾರಿಕೆ ಮತ್ತು ವಾಣಿಜ್ಯದ ಸ್ವರೂಪವನ್ನು ಪಡೆದಿದೆ, ಶಿಕ್ಷಣಕ್ಷೇತ್ರ ಹೆಚ್ಚುಹೆಚ್ಚಾಗಿ ಕಂಪ್ಯೂಟರೀಕರಣಗೊಳ್ಳುತ್ತಿದೆ. ಮನುಷ್ಯ ತನ್ನ ದೈವದತ್ತ ಮೆದುಳಿನ ಶಕ್ತಿಯಿಂದ ಮಾಡಬೇಕಾದ ಕೆಲಸವನ್ನು ತಾಂತ್ರಿಕ ಉಪಕರಣಗಳಿಂದ ಮಾಡಿಸಿಕೊಳ್ಳುತ್ತಿದ್ದಾನೆ. ಮೇಕ್ ಇನ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾ, ಸ್ಟಾರ್ಟ್ ಅಪ್ ಇಂಡಿಯಾ ಘೋಷಣೆಗಳ ಹಾಗೂ ಕಾರ್ಯ ಯೋಜನೆಗಳ ಗುರಿ ದೇಶದ ಜನಜೀವನದ ಎಲ್ಲ ಕ್ಷೇತ್ರಗಳನ್ನು ವಿದ್ಯುನ್ಮಾನಮಯ ಮಾಡುವದೇಯಾಗಿದೆ. ವಿಜ್ಞಾನಿಗಳ ಪ್ರಕಾರ ೨೦೪೫ರ ವೇಳೆಗೆ ಮನುಷ್ಯಮಾಡುವ ಕೆಲಸಗಳನ್ನು ಮಾಡುವ ರೋಬೋಗಳು ಬರುತ್ತವೆಂದು ಹೇಳಿದ್ದಾರೆ. ಮಾನವನನ್ನು ಹಿಂದಕ್ಕೆ ತಳ್ಳಿ ರೋಬೋಗಳೇ ಮುಂದಕ್ಕೆ ಬರಲಿವೆ ಎಂಬ ಸೂಚನೆ ಅವರು ಕೊಟ್ಟಿದ್ದಾರೆ. ಇಂದಿನ ನಮ್ಮ ಶಿಕ್ಷಣ ವ್ಯವಸ್ಥೆ ಈ ನಿಟ್ಟಿನತ್ತವೇ ಸಾಗುತ್ತಿದೆ. ತಾಂತ್ರಿಕ ಮಹಾವಿದ್ಯಾಲಯಗಳಲ್ಲಿ ಮಾನವ ಶಕ್ತಿಯನ್ನು ತೆಗೆದುಹಾಕುವಂಥ ಯಂತ್ರೋಪಕರಣಗಳ ಶೋಧನೆಗೆ ಪ್ರೋತ್ಸಾಹ ಕೊಡಲಾಗುತ್ತಿದೆ. ಕೃಷಿ ವಿಶ್ವವಿದ್ಯಾಲಯಗಳಲ್ಲಿಯು ಕೂಡ ಕೃಷಿಯನ್ನು ಹೇಗೆ

ಹೆಚ್ಚುಹೆಚ್ಚಾಗಿ ಯಾಂತ್ರಿಕರಣಗೊಳಿಸಬೇಕೆಂಬುದರ ಬಗ್ಗೆಯೇ ಸಂಶೋಧನೆಗಳು ನಡೆಯುತ್ತಿವೆ. ರೈತರಿಂದ ಕೃಷಿಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಉದಾ: ತೆಲಂಗಾಣದ ಹೊಸ ರಾಜ್ಯಧಾನಿ ಅಮರಾವತಿ ನಿರ್ಮಾಣಕ್ಕಾಗಿ ತುಂಬ ಫಲವತ್ತಾದ ೩೦ ಸಾವಿರ ಎಕರೆಗಳಿಗಿಂತಲೂ ಹೆಚ್ಚು ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಕರ್ನಾಟಕದಲ್ಲಿ ಕೈಗಾರಿಕೆಗಳ ಸ್ಥಾಪನೆಗಾಗಿ ೨೭ ಲಕ್ಷ ಎಕರೆ ಭೂಮಿಯನ್ನು ಮೀಸಲಿಡಲಾಗಿದೆ. ಇತ್ತೀಚೆಗೆ ಸ್ಮಾರ್ಟ್ ಸಿಟಿಗಾಗಿ ಆಯ್ಕೆಯಾದ ೨೦ ನಗರಗಳಿಗೆ ೫೦,೮೦೨ ಕೋಟಿ ರೂಪಾಯಿ ಹೂಡಿಕೆ ಹರಿದು ಬರುವುದರ ಜೊತೆಗೆ ಅವುಗಳ ಅಭಿವೃದ್ಧಿಗಾಗಿ ೨೬,೭೩೫ ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗುತ್ತಿದೆ. ಅಲ್ಲದೆ ಕೈಗಾರಿಕರಣ  ಮತ್ತು ಜಾಗತೀಕರಣದಿಂದಾಗಿ, ಗ್ರಾಮಗಳಲ್ಲಿಯ ಜನರ ಕೈಯಲ್ಲಿ ಬಹಳಷ್ಟು ಹಣ ಹರಿಯುತ್ತಿರುವುದರಿಂದ ಎಲ್ಲೆಲ್ಲಿಯು ಅರಮನೆಯಂತಹ ಮನೆಗಳು ಹೊಲಗಳಲ್ಲಿ ತಲೆಯತ್ತುತ್ತಿವೆ. ಈ ಎಲ್ಲ ಕಾರಣಗಳಿಂದಾಗಿ ಕೃಷಿಭೂಮಿ ಕಡಿಮೆಯಾಗುತ್ತಿರುವಾಗ, ಮತ್ತು ಕೃಷಿ ಮಾಡುವವರ ಸಂಖ್ಯೆಯೂ ಕಡಿಮೆಯಾಗುತ್ತಿರುವಾಗ ಜೀವನಕ್ಕೆ ಅಗತ್ಯವಾದ ಆಹಾರ ಪದಾರ್ಥಗಳ ತಯಾರಿಕೆಯು ಕೈಗಾರಿಕೆಯಲ್ಲಿಯೇ ಆಗುವಂಥ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಶ್ರಮರಹಿತ ಹಾಗೂ ಅನ್ನಕಾಯಕರಹಿತ ಕೊಳ್ಳಬಾಕ ಸಂಸ್ಕೃತಿಯನ್ನು ವಿದೇಶಿ ಕಂಪನಿಗಳ ಬಂಡವಾಳ ಹೂಡಿಕೆ ನಿರ್ಮಿಸುತ್ತಿದೆ. ಇದರ ಪರಿಣಾಮವಾಗಿ ಸಮಾಜದಲ್ಲಿ ಮೋಸ, ಹಿಂಸೆ, ನಿರುದ್ಯೋಗ, ಸ್ವೇಛ್ಛಾಚಾರ, ಅಸಹಿಷ್ಣತೆ ಮುಂತಾದವುಗಳು ಹೆಚ್ಚಾಗುತ್ತಿವೆ. ಸಾಮಾಜಿಕವಾಗಿ ಯಾವುದೇ ಒಂದು ಸಣ್ಣ ಘಟನೆ ಸಂಭವಿಸಿದರೂ ಅದಕ್ಕೆ ರಾಜಕೀಯ ಬಣ್ಣ ಕೊಡಲಾಗುತ್ತಿದೆ. ಇತ್ತೀಚೆಗೆ ಹೈದರಾಬಾದ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಸಂಶೋಧಕ ವಿದ್ಯಾರ್ಥಿಯ ಆತ್ಮಹತ್ಯೆ ಮತ್ತು ದಿಲ್ಲಿಯಲ್ಲಿಯ ಜವಾಹರಲಾಲ ನೆಹರು ವಿಶ್ವ ವಿದ್ಯಾಲಯದಲ್ಲಿಯ ವಿದ್ಯಾರ್ಥಿಗಳ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಾಳಿ ಇದಕ್ಕೆ ಉದಾಹರಣೆ.

ಹೀಗೆ ಸಮಾಜ ಅನೇಕ ಪ್ರಕಾರದ ಕಷ್ಟಗಳಿಗೆ ಸಿಲುಕುತ್ತಿದೆ. ಜೀವನ ದುಸ್ತರವಾಗುತ್ತಿದೆ. ಜೀವನದ ಮೂಲದ್ರವ್ಯಗಳಾದ ಸತ್ಯ ಮತ್ತು ಧರ್ಮಗಳು ತಲೆಮರಿಸಿಕೊಳ್ಳುತ್ತಿವೆ. ಅವುಗಳ ಬದಲಾಗಿ ಚಿನ್ನದ ಹೊಳಪು ಮಾತ್ರ ಜನರ ಕಣ್ಣಿಗೆ ರಾಚಿಸುತ್ತಿದೆ. ಸಮಾಜದ ಪ್ರಗತಿಯನ್ನು ಅಳೆಯುವ ವಿಷಯ ಸಮಾಜದಲ್ಲಿರುವ ಪ್ರತಿ ವ್ಯಕ್ತಿಯ ಜೀವನದಲ್ಲಿಯ ಸಂತೋಷ, ನೆಮ್ಮದಿ, ಶಾಂತಿಗಳೇ ವಿನಃ ಕೇವಲ ಭೌತಿಕ ಸಂಗ್ರಹವಲ್ಲ. ಈ ದೃಷ್ಟಿಯಿಂದ ನೋಡಿದರೆ ಇಂದು ಎಲ್ಲರ ಜೀವನದಲ್ಲಿ ಅಶಾಂತಿ, ಅಸಂತೋಷ ಮತ್ತು ಅಸೌಖ್ಯ ಕಾಣುತ್ತಿದೆ. ಧಾರ್ಮಿಕ ಕ್ಷೇತ್ರಗಳಲ್ಲಿ ಗ್ಲಾನಿ, ಆಧ್ಯಾತ್ಮ ಕ್ಷೇತ್ರಗಳಲ್ಲಿ ಗ್ಲಾನಿ, ಶಿಕ್ಷಣ ಕ್ಷೇತ್ರದಲ್ಲಿ ಗ್ಲಾನಿ, ಸಂಸಾರಗಳಲ್ಲಿ ಗ್ಲಾನಿ ಹೀಗೆ ಜೀವನದ ಯಾವ ಕ್ಷೇತ್ರವೂ ಗ್ಲಾನಿಯಿಂದ ಹೊರತಾಗಿಲ್ಲದೆ ಇರುವಾಗ ನಮ್ಮ ಮುಂದಿರುವ ಪ್ರಶ್ನೆ ಬಂಡವಾಳವೇನೋ ಹರಿದು ಬಂತು ಆದರೆ ಸಮಾಜದ ಪಾಡೇನು ಎಂಬುದು.

# ಧರ್ಮದ ನೈಜ ಸ್ವರೂಪ

–ವಿನೋಬಾ

(ಜಗತ್ತಿನಲ್ಲಿ ಇಂದು ಧರ್ಮಗಳ ವಿಷಯದಲ್ಲಿ ಕೋಲಾಹಲ ಉಂಟಾಗಿದೆ. ಜನರು ಭಯಭೀತರಾಗಿದ್ದಾರೆ ಧರ್ಮದ ನಿಜಾರ್ಥವನ್ನು ಜನಸಾಮಾನ್ಯರು ಅರ್ಥ ಮಾಡಿಕೊಂಡಾಗ ಧರ್ಮಗಳ ಕೋಲಾಹಲ ನಿಲ್ಲುವುದು. ಆ ನಿಟ್ಟಿನತ್ತ ಈ ಲೇಖನ ಸಹಕಾರಿಯಾಗಿದೆ. ಸಂ)

ಜಗತ್ತಿನಲ್ಲಿ ಪಶು ಮತ್ತು ಮನುಷ್ಯ ಇಬ್ಬರೂ ಇರುತ್ತಾರೆ. ಇಬ್ಬರಲ್ಲಿಯೂ ಕೆಲವು ವಿಷಯಗಳು ಸಮಾನವಾಗಿರುತ್ತವೆ, ಆದರೆ ಕೆಲವು ವಿಷಯಗಳು ಮಾನವ ಜೀವನದ ವಿಶೇಷವಾಗಿರುತ್ತವೆ. ಆ ವಿಶೇಷತೆಗಳಲ್ಲಿ ಒಂದು, ಧರ್ಮ ಭಾವನೆ! ಮನುಷ್ಯನಿಗೆ ಯಾವಾಗಲೂ ಒಳಗಿನಿಂದ ಒಂದು ಪ್ರೇರಣೆಯಾಗುತ್ತದೆ. ತನ್ನ ವ್ಯವಹಾರ ಸರಿಯಿದೆಯೇ ಇಲ್ಲವೇ ಎಂಬುದನ್ನು ಯೋಚಿಸುತ್ತಿರುತ್ತಾನೆ. ಯಾವನೋ ಒಬ್ಬನು ಬಹಳಷ್ಟು ಹಣ ಸಂಪಾದನೆ ಮಾಡಿದ, ಆದರೂ ಕೂಡ ಅವನ ಹೃದಯದಲ್ಲಿ ಸಮಾಧಾನವಿಲ್ಲ. ಹಣದ ಕಾರಣದಿಂದ ಜೀವನದಲ್ಲಿ ಅನುಕೂಲತೆಗಳೇ ಆಗುತ್ತವೆ, ಜೀವನ ಸುಲಭವಾಗುತ್ತದೆ, ಆದರೂ ಕೂಡ ಒಳಗೆ ಶಾಂತಿ, ಸಮಾಧಾನ ಇರುವುದಿಲ್ಲ. ಇನ್ನೊಂದು ಕಡೆಗೆ ಬಡವರಲ್ಲಿ ಅನೇಕರಿಗೆ ಪೂರ್ತಾ ಊಟ ಸಿಗುವುದಿಲ್ಲ, ಇದರಿಂದಾಗಿ ಅವರ ಮನಸ್ಸಿನಲ್ಲಿ ಕೂಡ ಶಾಂತಿ ಇರುವುದಿಲ್ಲ. ಹಾಗಿದ್ದಮೇಲೆ ಮನುಷ್ಯನ ಮನಸ್ಸಿಗೆ ಯಾವುದರಿಂದ ಸಮಾಧಾನವಾಗುತ್ತದೆ? ಇದು ಯೋಚಿಸುವ ಮತ್ತು ಶೋಧಿಸುವ ವಿಷಯವಾಗುತ್ತದೆ.

ಮನುಷ್ಯ ದಿನಾಲೂ ತಿನ್ನುತ್ತಾನೆ, ಭೋಗ ಭೋಗಿಸುತ್ತಾನೆ. ಆದರೆ ಒಂದು ದಿನ ಏಕಾದಶಿಯು ಉಪವಾಸ ಮಾಡುತ್ತಾನೆ ಆಗ ಅವನ ಮನಸ್ಸಿಗೆ ಸಮಾಧಾನವಾಗುತ್ತದೆ. ಏಕಾದಶಿಯ ಹೆಸರಿನಲ್ಲಿ ತಿನ್ನುವುದನ್ನು ಬಿಡುವ ಪ್ರಾಣಿ ಕೇವಲ ಮನುಷ್ಯ ಮಾತ್ರ, ಮುಸಲ್ಮಾನರು ರೋಜಾದ ದಿನಗಳಲ್ಲಿ ಊಟ ಬಿಡುತ್ತಾರೆ. ಇದರ ಅರ್ಥ ಕೇವಲ ತಿನ್ನುವುದು ಮತ್ತು ಕುಡಿಯುವುದರಿಂದ ಮನುಷ್ಯನಿಗೆ ತನ್ನ ಜೀವನದ ಸಾರ್ಥಕತೆ ಗೊತ್ತಾಗುವುದಿಲ್ಲ. ತನ್ನ ಇಂದ್ರಿಯಗಳ ಮೇಲೆ ಹಿಡಿತ ಇಟ್ಟುಕೊಳ್ಳುವುದು, ಭಗವಂತನ ನ್ನಾವು ಸ್ಮರಿಸುವುರಿಂದ ಮನುಷ್ಯನಿಗೆ ಸಂತೋಷವಾಗುತ್ತದೆ. ಆದ್ದರಿಂದ ಅವನು ಏಕಾದಶಿಯ ದಿನ ಭಗವಂತನಿಗಾಗಿ ಉಪವಾಸ ಮಾಡುತ್ತಾನೆ. ಆದರೆ ಏಕಾದಶಿಯ ವ್ರತ ಮಾಡುವುದರಿಂದ ಮಾತ್ರವೆ ಅವನಿಗೆ ಪೂರಾ ಸಮಾಧಾನವಾಗುವುದಿಲ್ಲ. ಎಲ್ಲಿಯವರೆಗೆ ಅವನು ಹಸಿದವನಿಗೆ ಊಟ ಕೊಡುವುದಿಲ್ಲವೊ ಅಲ್ಲಿಯವರೆಗೆ ಸಮಾಧಾನವಾಗುವುದಿಲ್ಲ. ಮನುಷ್ಯನನ್ನು

ಭಗವಂತ ಭಿನ್ನ ಬಗೆಯಾಗಿ ಹುಟ್ಟಿಸಿದ್ದಾನೆ. ಅವನ ಹೃದಯದಲ್ಲಿ ಸದ್ಭಾವನೆ ಇಟ್ಟಿದ್ದಾನೆ, ಅನುಕಂಪ ಇಟ್ಟಿದ್ದಾನೆ. ಅವು ಪಶುಗಳಲ್ಲಿ ಇರುವುದಿಲ್ಲ. ಆದ್ದರಿಂದ ಮನುಷ್ಯ ಬೇರೆಯವರ ದುಃಖವನ್ನು ಸಹಿಸಲಾರ ಯಾವುದೇ ಪ್ರಾಣಿ ದುಃಖದಿಂದ ಸಂಕಟಪಡುತ್ತಿದ್ದರೆ ಎಲ್ಲಿ ಅದರ ದುಃಖದ ನಿವಾರಣೆಗಾಗಿ ಏನನ್ನಾದರು ಮಾಡುವವರೆಗೆ ಅವನಿಗೆ ಸಮಾಧಾನವಾಗುವುದಿಲ್ಲ. ತನ್ನ ಭೋಗದ ಸ್ವಲ್ಪ ಭಾಗವನ್ನು ತ್ಯಾಗಮಾಡಿ ಎರಡನೆಯವರ ದುಃಖ ನಿವಾರಣೆಯಲ್ಲಿ ಸಹಾಯ ಮಾಡುವುದರಿಂದ ಮನಸ್ಸಿಗೆ ಸಂತೋಷ ಮತ್ತು ಸಮಾಧಾನವಾಗುತ್ತದೆ.

ಸಾರವಿಷ್ಟೆ: ಮನುಷ್ಯನಲ್ಲಿ ಭೋಗ ಮತ್ತು ಐಶ್ವರ್ಯದ ವೃತ್ತಿ ಇರುವಂತೆಯೇ ಎರಡನೆ ಪ್ರಕಾರದ ವೃತ್ತಿಗಳೂ ಕೂಡ ಇವೆ. ಕೇವಲ ಭೋಗವೇ ಇಲ್ಲ, ಧರ್ಮದ ಬಗ್ಗೆ ಇಚ್ಛೆ ಮತ್ತು ಧರ್ಮ ಪ್ರೇರಣೆ ಕೂಡ ಮನುಷ್ಯನಲ್ಲಿ ತುಂಬಾ ಬಲವತ್ತರವಾಗಿರುತ್ತವೆ. ಧರ್ಮ ಪ್ರೇರಣೆಗೆ ಮುಖ್ಯ ಸ್ಥಾನ ಕೊಟ್ಟು ಉಳಿದ ವಿಷಯಾಸಕ್ತಿಗಳನ್ನು ಅದರ ಅಂಕುಶದಲ್ಲಿ ಇಡುವ ಬುದ್ಧಿ ಮನುಷ್ಯನಿಗೆ ಹೊಳೆಯುತ್ತದೆ ಮತ್ತು ಅದು ಉತ್ತರೋತ್ತರ ಹೊಳೆಯುತ್ತಾ ಹೋಗುತ್ತದೆ.

ಮನುಷ್ಯನಿಗೆ ಪ್ರೇರಣೆ ಅವನ ಮನಸ್ಸಿನಿಂದ ದೊರೆಯುತ್ತದೆ. ಮನಸ್ಸು ಕೇವಲ ವ್ಯಕ್ತಿಗತವಾಗಲಿ, ಸ್ವಂತದ್ದಾಗಿಯಾಗಲಿ ಇರುವುದಿಲ್ಲ. ಬದಲಿಗೆ, ಇಡೀ ಸಮಾಜದ್ದು ಕೂಡ ಒಂದು ಸಾಮೂಹಿಕ ಮನಸ್ಸಿರುತ್ತದೆ. ಆ ಸಾಮೂಹಿಕ ಮನಸ್ಸು ದಿನದಿಂದ ದಿನಕ್ಕೆ ಬದಲಾಗುತ್ತಿರುತ್ತದೆ. ಪ್ರತಿಯೊಂದು ದೇಶದಲ್ಲಿ ಇದು ಬದಲಾಗಿದೆ. ಆಯಾಕಾಲದಲ್ಲಿ ಆಯಾ ಸಮಾಜದ ಮನಸ್ಸು ಒಂದು ರೀತಿ ಕೆಲಸ ಮಾಡುತ್ತಿತ್ತು. ಇಂದು ವಿಜ್ಞಾನದ ಕಾಲದಲ್ಲಿ ಜಗತ್ತಿನ ಸಮಾಚಾರವನ್ನು ಒಂದು ಸ್ಥಳದಲ್ಲಿ ಕುಳಿತುಕೊಂಡು ನಿತ್ಯ ತಿಳಿದುಕೊಳ್ಳಬಹುದಾಗಿದೆ. ಹಿಂದಿನ ಕಾಲದಲ್ಲಿ ಈ ಎಲ್ಲ ಸಾಧನಗಳು ಇರಲಿಲ್ಲ. ಆದರೂ ಕೂಡ ಜಗತ್ತಿನಲ್ಲಿ ಎಲ್ಲಿ ಎಲ್ಲಿ ಮನುಷ್ಯ ನೆಲೆಸಿದ್ದಾನೊ ಅಲ್ಲಿಅಲ್ಲಿ ಒಂದೇ ಪ್ರಕಾರದ ಮನಸ್ಸು ಕೆಲಸ ಮಾಡಿಕೊಂಡಿತ್ತು.

ಎರಡೂವರೆ ಸಾವಿರ ವರ್ಷಗಳ ಹಿಂದಿನ ಕಾಲ ತೆಗೆದು ಕೊಂಡರೆ, ಆ ಕಾಲದಲ್ಲಿ ಭಾರತದಲ್ಲಿ ವೈದಿಕ, ಬೌದ್ಧ ಮತ್ತು ಜೈನ ಧರ್ಮದ ವಿಚಾರ ಪ್ರವಾಹಗಳಿದ್ದವು. ಸಮಾಜದಲ್ಲಿ ತಿನ್ನುವ ಮತ್ತು ಕುಡಿಯುವಂಥ ಸಾಮಾನ್ಯ ಸಂಗತಿಗಳು ನಡೆಯುತ್ತಲೇ ಇದ್ದವು. ಆದರೆ ಭಗವಾನ್ ಬುದ್ಧ ಮತ್ತು ಮಹಾವೀರರಂಥ ವ್ಯಕ್ತಿಗಳು ಹುಟ್ಟುವಂಥ ಒಂದು ಪ್ರೇರಣೆ ಕೆಲಸ ಮಾಡುತ್ತಿತ್ತು. ಅವರು ಧರ್ಮ ಸ್ಥಾಪನೆ ಮಾಡಿದರು. ಅದೇ ಸಮಯದಲ್ಲಿ ಚೀನದಲ್ಲಿ ಕೂಡ ಲಾವೋತ್ಸೆ, ಕನಫ್ಯೂಷಿಯಸ್ ಮುಂತಾದವರು ತಾವೋರ ಬಗ್ಗೆ ವಿಚಾರಮಾಡುತ್ತಿದ್ದರು. ಅದರಿಂದಾಗಿ ಅಲ್ಲಿಯೂ ಕೂಡ ಧರ್ಮ ಸಂಸ್ಥಾಪನೆಯಾಯಿತು. ಅಂದರೆ ಅಲ್ಲಿಯಜನರಲ್ಲಿ ಆ ಸಮಯದಲ್ಲಿ ಇಂಥದೇ ಹಸಿವು ಉಂಟಾಗಿತ್ತು. ಆ ಸಮಯದಲ್ಲಿ ಚೀನ ಮತ್ತು ಹಿಂದೂಸ್ಥಾನ ಒಂದು ಇನ್ನೊಂದುರ ಬಗ್ಗೆ ಬಹಳ ಕಡಿಮೆ ತಿಳಿದು ಕೊಂಡಿದ್ದವು. ಅದೇ ಕಾಲದಲ್ಲಿ ಇರಾನ್

ಮತ್ತು ಫಿಲಿಸ್ತೀನಗಳಲ್ಲಿ ಅದೇ ಪ್ರಕಾರದ ಪ್ರೇರಣೆ ಇದ್ದದ್ದು ಗೊತ್ತಾಗುತ್ತದೆ. ಇರಾನ್ ನಲ್ಲಿ ಜರಥುಶ್ತಗೆ ಮತ್ತು ಈಜಿಪ್ಟ್ ನಲ್ಲಿ ಮೂಸ ಮತ್ತು ಫಿಲಿಸ್ತೀನನಲ್ಲಿ ಯೇಸು ನಮಗೆ ಕಾಣುತ್ತಾರೆ. ಅವರು ಪಾರ್ಸಿ, ಯಹೂದಿ, ಇಸಾಯಿ ಮುಂತಾದ ಧರ್ಮಗಳ ಸ್ಥಾಪನೆ ಮಾಡಿದರು. ಅಂದರೆ ಆ ಐದುನೂರು ವರ್ಷಗಳ ಒಳಗೆ ಜಗತ್ತಿನ ಎಲ್ಲ ದೇಶಗಳಲ್ಲಿ ಧರ್ಮ ಸಂಸ್ಥಾಪನೆಯ ಕೆಲಸ ನಡೆದುದು ಕಾಣುತ್ತದೆ.

ಜಗತ್ತಿನಲ್ಲೆಲ್ಲ ಮನುಷ್ಯರಿಗೆ ಧರ್ಮ ಸಂಸ್ಥಾಪನೆಯ ಪ್ರೇರಣೆ ಹೇಗೆ ದೊರೆಯಿತು? ವ್ಯಕ್ತಿಯ ಮನಸ್ಸಿನ ರೀತಿ ಸಮಾಜದ ಮನಸ್ಸಿಗೆ ಕೂಡ ಪರಮೇಶ್ವರನಿಂದ ಪ್ರೇರಣೆ ದೊರೆಯುತ್ತದೆ ಎಂಬುದೇ ಈ ಪ್ರಶ್ನೆಗೆ ಉತ್ತರವಾಗಿದೆ. ಒಂದು ಕಡೆಗೆ ಮೂಸ ಕೆಲಸ ಮಾಡುತ್ತಿರುವಾಗ ಇನ್ನೊಂದು ಕಡೆಗೆ ತಾವೋತ್ಸೆ ಕೆಲಸ ಮಾಡುತ್ತಿದ್ದಾರೆ ಎಂಬುದು ಅವರಿಗೆ ಗೊತ್ತಿರಲಿಲ್ಲ. ಆದರೂ ಕೂಡ ಒಂದು ಅವ್ಯಕ್ತ ಗಾಳಿಯಂಥದು ಹರಡುತ್ತಿತ್ತು ಅದಕ್ಕೆ ಕಾರಣ ಒಂದು ಸರ್ವಾಂತರ್ಯಾಮಿ ಸರ್ವಪ್ರೇರಕ ಪರಮೇಶ್ವರನೆ ಇರಲು ಸಾಧ್ಯ. ನಮಗೆ ಒಂದುವೇಳೆ ಪರಮೇಶ್ವರ ಎಂಬ ಶಬ್ಧ ಒಪ್ಪಿಗೆ ಇಲ್ಲದಿದ್ದರೆ ಇಡೀ ಜಗತ್ತಿನ 'ವಿವೇಕ ಶಕ್ತಿ' ಎಂದೆನ್ನಬಹುದು. ಅದು ಎಲ್ಲರಿಗೆ ಪ್ರೇರಣೆ ಕೊಡುತ್ತದೆ! ನಾವು ಪರಮೇಶ್ವರ ಎಂದಾಗಲಿ ವಿವೇಕ ಶಕ್ತಿ ಎಂದಾಗಲಿ ಕರೆದರೂ ಕೂಡ ಅವುಗಳ ಅರ್ಥ ಮಾತ್ರ ಒಂದೆ. ಪರಮೇಶ್ವರ ಶಬ್ಧದಿಂದ ನಾವು ಹೆಚ್ಚು ಆಳವಾಗಿ ಹೋಗಲು ಸಾಧ್ಯ. ವಿವೇಕ ಶಕ್ತಿ ಎಂದು ಹೇಳುವುದರಿಂದ ಅಷ್ಟು ಆಳವಾಗಿ ಹೋಗಲು ಸಾಧ್ಯವಿಲ್ಲ. ಇನ್ನು ಇದಕ್ಕಿಂತ ಭಿನ್ನ ಯಾವುದೇ ಅರ್ಥ ಭೇಧವಿಲ್ಲ.

ನಮ್ಮ ಈ ಭಾರತ ಭೂಮಿಯಲ್ಲಿ ಬಹಳ ಪ್ರಾಚೀನ ಕಾಲದಿಂದ ಇಂದಿನವರೆಗೆ 'ಧರ್ಮ' ಶಬ್ಧವನ್ನು ಸತತವಾಗಿ ಉಪಯೋಗಿಸುತ್ತಾ ಬರಲಾಗಿದೆ. ಹೊರಗಿನ ಯಾವುದೇ ಭಾಷೆಗಳಲ್ಲಿ ಸರಿಯಾದ ಪ್ರತಿಶಬ್ಧ ಸಿಗುವುದಿಲ್ಲ. ಧರ್ಮ ಶಬ್ಧದ ಅನುವಾದವನ್ನು ಬೇರೆ ಭಾಷೆಗಳಿಗೆ ಅನುವಾದ ಮಾಡಲು ಹೋದಾಗ ಕಷ್ಟವಾಗುತ್ತದೆ. ಧರ್ಮ ಸಂಸ್ಕೃತ ಶಬ್ಧ, ಮರಾಠಿ, ಹಿಂದಿ ಮುಂತಾದ ಭಾರತೀಯ ಭಾಷೆಗಳಲ್ಲಿ ಅದರ ಅರ್ಥ ಧರ್ಮ ಎಂದರೆ ಧರ್ಮ! ಯಾವ ರೀತಿ ಮಗುವನ್ನು ನಿನ್ನ ಅಮ್ಮನ ಹೆಸರು ಏನೆಂದು ಕೇಳಿದಾಗ ಅದು ಅಮ್ಮ ಎಂದು ಹೇಳುವಂತೆಯೆ.

ವಿಷ್ಣು ಮೂರು ಹೆಜ್ಜೆಗಳನ್ನು ಇಟ್ಟ, ಒಂದು ಸ್ವರ್ಗದಲ್ಲಿ, ಎರಡನೆಯದು, ಅಂತರಿಕ್ಷದಲ್ಲಿ ಮತ್ತು ಮೂರನೆಯದು ಪೃಥ್ವಿಯ ಮೇಲೆ ಎಂಬ ವರ್ಣನೆ ವೇದಗಳಲ್ಲಿ ಬರುತ್ತದೆ. ವಿಷ್ಣು ಈ ಮೂರು ಹೆಜ್ಜೆಗಳನ್ನು ಏಕೆ ಇಟ್ಟ? ಅತೋ ಧರ್ಮಾಣಿ ಧಾರಯನ್- ಧರ್ಮದ ಧಾರಣಕ್ಕಾಗಿ, ಮೂರೂ ಜಗತ್ತಿಗೆ ಧರ್ಮದ ಸಂಸ್ಕಾರ, ಧರ್ಮದ ಶಿಕ್ಷಣ ಕೊಡುವುದಕ್ಕಾಗಿ.

ಧರ್ಮ ಒಂದು ವ್ಯಾಪಕ ಶಬ್ಧ. ಯಾವ ಮೂರೂ ವಿಚಾರಗಳ ಮೇಲೆ ನಮ್ಮ ಜೀವನ ನಡೆಯುತ್ತದೋ ಅದನ್ನು ಧರ್ಮ ಎನ್ನುತ್ತೇವೆ. ಧರ್ಮ ಅವಿಚಲ. ಅದರ ಸಿದ್ಧಾಂತ ಗಟ್ಟಿ ಸಿದ್ಧಾಂತ ಈ ದೇಶ ಮತ್ತು ಆ ದೇಶದಲ್ಲಿ ಹಾಗೂ ಈ ಕಾಲ

ಮತ್ತು ಆ ಕಾಲದಲ್ಲಿ ಕೂಡ ಸ್ಥಿರವಾಗಿರುವಂತೆ ಅದೇ ಧರ್ಮ ಸಿದ್ಧಾಂತಗಳಲ್ಲಿ ಕೂಡ ಬೇಧ ಉಂಟಾಗುವುದಿಲ್ಲ. ಧರ್ಮ ಸಿದ್ಧಾಂಥ ಮೂಲಭೂತವಾಗಿರುತ್ತವೆ. ಮೂರೂ ಕಾಲಗಳಲ್ಲಿ ಮತ್ತು ಎಲ್ಲ ದೇಶಗಳಲ್ಲಿ ಸಮಾನ ಮತ್ತು ಅವಿಚಲ ಆಗಿರುತ್ತವೆ. ಉದಾಹರಣೆಗೆ ಸತ್ಯನಿಷ್ಠೆ, ಪ್ರೇಮ, ದಯೆ ಈ ಸದ್ಗುಣಗಳನ್ನು ದೈವೀಸಂಪತ್ತಿ ಎಂದು ಭಗವಂತನು ಕರೆದಿದ್ದಾನೆ. ವಸ್ತುತಃ ಅವೇ ಸನಾತನ ಧರ್ಮ. ಅವು ಅವಿಚಲ, ಧೃವ, ಶಾಶ್ವತ, ಸ್ಥಿರ ಮತ್ತು ನಿತ್ಯ. ಇವುಗಳನ್ನು ನಾವು ಪ್ರಾಚೀನ ಕಾಲದಿಂದಲೂ ಒಪ್ಪಿದ್ದೇವೆ. ಮತ್ತು ಈಗಲೂ ಒಪ್ಪಿದ್ದೇವೆ.

ಯಾವುದು ಧಾರಣ ಮಾಡುತ್ತದೋ ಅದು ಧರ್ಮ. ಅದು ಮೂಲಭೂತವಾದುದು. ಅದರ ಅಭಾವದಲ್ಲಿ ಜೀವನ ಚಿನ್ನವಿಚ್ಛಿನ್ನವಾಗುವುದೊ, ಅದು ಧರ್ಮ. ಮನುಷ್ಯ ಕರ್ಮವಿಲ್ಲದೆ ಒಂದು ಕ್ಷಣ ಕೂಡ ಇರಲಾರ. ಹಸಿವೆ ಕರ್ಮ ಮಾಡುವುದಕ್ಕಾಗಿ ದೊಡ್ಡ ಪ್ರೇರಣೆಕೊಡುತ್ತದೆ. ಎಲ್ಲ ಪ್ರಾಣಿಗಳಿಗೆ ಹಸಿವಿದೆ; ಮತ್ತು ಹಸಿವಿನ ತೃಪ್ತಿಗಾಗಿ ಯಾವುದಾದರೂ ಕರ್ಮವನ್ನು ಮಾಡಲೇಬೇಕಾಗುತ್ತದೆ. ಆದರೆ ಕರ್ಮ ಮಾಡುವ ಸಮಯದಲ್ಲಿ ಸತ್ಯದ ಬಗ್ಗೆ ಗಮನ ಬಿಡಬೇಕಾಗುವುದು. ಇಲ್ಲವಾದರೆ ಅದು ಧರ್ಮಚರಣೆವಾಗುವುದಿಲ್ಲ. ಅಂದರೆ ಮೌಲ್ಯಗಳನ್ನು ಬಿಡಬಾರದು. ಅವುಗಳ ಮೇಲೆ ಧೃಢವಾಗಿ ನಿಲ್ಲಬೇಕು ಆಗ ಅದು ಧರ್ಮಾಚರಣೆ. ಧರ್ಮ ಸೂಕ್ಷ್ಮ ರೂಪದಲ್ಲಿದೆ. ಕರ್ಮ ಶರೀರ, ಧರ್ಮ ಪ್ರಾಣ.

ಶರೀರ ಮತ್ತು ಆತ್ಮದ ಮಧ್ಯೆ, ಅಥವ ವ್ಯವಹಾರ ಮತ್ತು ತತ್ವವಿಚಾರದ ಮಧ್ಯೆ, ಅಥವ ಇಂದಿನ ಸ್ಥಿತಿ ಹಾಗು ಪ್ರಾಪ್ತವ್ಯ ಸ್ಥಿತಿಯ ಮಧ್ಯೆ, ಧರ್ಮ ಒಂದು ಸೇತುವೆಯಂತೆ ಕೆಲಸ ಮಾಡುತ್ತದೆ. ನದಿಯ ಒಂದೇ ದಂಡೆಯಮೇಲೆ ಸೇತುವೆ ಇರುವುದಿಲ್ಲ. ಬದಲಿಗೆ ನದಿಯ ಎರಡೂ ದಂಡೆಗಳ ಮೇಲೆ ಇರುತ್ತದೆ. ಭೋಗ ಈ ಪಕ್ಕದಲ್ಲಿದೆ, ಮೋಕ್ಷ ಆ ಪಕ್ಕದಲ್ಲಿದೆ. ಧರ್ಮ ಎರಡೂ ಕಡೆಗೆ ಇದೆ. ಸಮಾಜವನ್ನು ಇಂದಿನ ಪರಿಸ್ಥಿತಿಯಿಂದ ಆದರ್ಶದ ಕಡೆಗೆ ಕರೆದುಕೊಂಡುಹೋಗಲು ಯಾವ ವಿಚಾರ ಪ್ರಸ್ತುತವೆಂದರೆ ಅದು ಧರ್ಮದವಿಚಾರ. ಕೇವಲ ಪರಿಶುದ್ಧ ತತ್ವಜ್ಞಾನದ ಸ್ವರೂಪವನ್ನು ಅದು ತೆಗೆದುಕೊಳ್ಳಲಾರದು. ಅದು ಪರಿಶುದ್ಧ ತತ್ವಜ್ಞಾನದಲ್ಲಿ ಸಹಜವಾಗಿ ತಲುಪಿಸುವ ವಾಹನವಾಗಿದೆ. ಪಥ ಮತ್ತು ವಸತಿ ಇವುಗಳಲ್ಲಿ ಇರುವಂಥ ಭೇದ ಮತ್ತು ಸಂಬಂಧದಂತೆಯೇ ಧರ್ಮ ಮತ್ತು ಮೋಕ್ಷದಲ್ಲಿದೆ. ನಿಜವಾದ ಧರ್ಮ ಪ್ರತ್ಯಕ್ಷ ಅನುಭವದಾಗಿರುತ್ತದೆ. ನೀರಡಿಸಿದ ಮನುಷ್ಯನಿಗೆ ನೀವು ನೀರು ಕುಡಿಸಿದರೆ ಅವನಿಗೆ ಆನಂದವಾಗುತ್ತದೆ. ಅಂತೆಯೇ ನಿಮ್ಮ ಮನಸ್ಸಿಗೂ ಆನಂದವಾಗುತ್ತದೆ. ಒಂದುವೇಳೆ ನೀರು ಕುಡಿಯುವವನ ಹೃದಯದಲ್ಲಿ ಸಮಾಧಾನವಾದರೆ ಅದು ಉತ್ತಮ ಧರ್ಮವೆಂದು ತಿಳಿಯಬೇಕು. ನೀವು ಈಗ ಬೆಲ್ಲ ತಿಂದಿರಿ ಅದು ಈಗ ಸಿಹಿ ಅನಿಸುವುದು. ಸತ್ತ ನಂತರ ಸಿಹಿ ಅನಿಸುವುದು ಎಂದೇನಲ್ಲ ಅದೇ ರೀತಿ ಧರ್ಮಾಚರಣೆ ಮಾಡಿದರೆ ಶಾಂತಿಯ ಅನುಭವ ಆ ಗಳಿಗೆಯಲ್ಲಿಯೇ ಆಗಬೇಕು. ಧರ್ಮದ ಫಲ

ಸಾಲವಲ್ಲ ಅದು ನಗದು. ನೀವು ತಿಂದರೆ ಅದೇ ಕ್ಷಣ ತೃಪ್ತಿ! ಒಂದೊಂದು ತುತ್ತು ಬಾಯಲ್ಲಿ, ಅದರೊಂದಿಗೆ ತುಷ್ಟಿ ಮತ್ತು ಪುಷ್ಟಿಯ ಅನುಭವ. ಅದೇ ರೀತಿ ಧರ್ಮಾಚರಣೆಯದು.

ಯಾವ ಪ್ರಕಾರ ಕಣ್ಣು, ಕಿವಿ ಮುಂತಾದ ಇಂದ್ರಿಯಗಳ ಮೂಲಕ ಮನಸ್ಸು ಬೇರೆ ಬೇರೆ ರೀತಿಯಿಂದ ಪ್ರಕಟವಾಗುತ್ತದೋ ಅದೇ ಪ್ರಕಾರ ರಾಜನೀತಿ, ಸಮಾಜವ್ಯವಸ್ಥೆ, ಆರ್ಥಿಕ ಪ್ರವೃತ್ತಿ ಮುಂತಾದ ವಿಷಯಗಳ ಮೂಲಕ ಮನುಷ್ಯನ ಧರ್ಮ ವ್ಯಕ್ತವಾಗುತ್ತದೆ. ಒಂದು ವೇಳೆ ವ್ಯವಹಾರದ ಕ್ಷೇತ್ರದಲ್ಲಿ ಧರ್ಮಕ್ಕೆ ಅವಕಾಶವಿಲ್ಲದಿದ್ದರೆ ಧರ್ಮ ವಾಸವಿರುವುದೆಲ್ಲಿ? ಶಂಕರಾಚಾರ್ಯರ ಮಠದಲ್ಲೆ? ಮಠದಲ್ಲಿ ಇರುವುದಾದರೆ ಅದು ಎಷ್ಟು 'ಪವಿತ್ರ' ವಾಗುತ್ತದೋ ಅಷ್ಟೇ ಅಸ್ಪೃಶ್ಯವಾಗಿ ಕುಳಿತುಬಿಡುವುದು. ಅಂದರೆ ಇದರರ್ಥ ಶಂಕರಾಚಾರ್ಯರ ಮಠದಲ್ಲಿ ಧರ್ಮ ಇರಬಾರದೆಂದಲ್ಲ; ಆದರೆ ರಾಜನೀತಿಯ ಕಕ್ಷೆಯಲ್ಲಿ ಅಸ್ಪೃಶ್ಯ ಎಂದು ತಿಳಿಯಲ್ಪಡದಿರಲಿ; ವ್ಯಾಪಾರೀಯ ಅಂಗಡಿಯಲ್ಲಿ ಕೂಡ ಅದು ಪ್ರವೇಶ ಮಾಡಲಿ; ವ್ಯವಹಾರದ ಎಲ್ಲ ಕಟ್ಟೆಗಳಲ್ಲಿ ಅದು ವ್ಯಾಪಿಸಲಿ. ಆಗ ಧರ್ಮಕ್ಕೆ ಏನಾದರೂ ಅರ್ಥ ಬರುತ್ತದೆ. ಧರ್ಮ ಮತ್ತು ವ್ಯವಹಾರದ ಜೋಡಿಯನ್ನು ಯಾವುದೇ ಪರಿಸ್ಥಿತಿಯಲ್ಲಿ ಮುರಿಯಕೂಡದು ಎರಡರ ಹೊಂದಾಣಿಕೆಯಾಗಬೇಕು. ಆ ಹೊಂದಾಣಿಕೆ ವ್ಯವಹಾರವನ್ನು ಪಾವನ ಮಾಡುವುದು.

ಹಿಂದೂಸ್ಥಾನದ ಜನ ಧರ್ಮವನ್ನು ಅರ್ಥ ಮಾಡಿಕೊಂಡಿಲ್ಲ ಎಂದೇನಲ್ಲ. ಆದರೆ ಪೇಟೆಯಲ್ಲಿ, ವ್ಯವಹಾರದಲ್ಲಿ, ಜೀವನದಲ್ಲಿ ಅದರ ಅಗತ್ಯವಿಲ್ಲ ಎಂದು ತಿಳಿಯುತ್ತಾರೆ. ಒಂದು ಕಥೆ ನೆನಪಿಗೆ ಬರುತ್ತದೆ – ಬಿರುಗಾಳಿ ಬಂದಿತ್ತು. ಅಪಕ್ವವಾದ ಮಾವು ಗಿಡದಿಂದ ಕೆಳಗೆ ಬಿದ್ದಿದ್ದವು. ರೈತರಿಗೆ ಬಹಳ ಹಾನಿಯಾಗಿತ್ತು. ಅಳಿದುಳಿದ ಮಾವನ್ನು ತೆಗೆದುಕೊಂಡು ಮಾರುವುದಕ್ಕಾಗಿ ಓರ್ವ ರೈತ ಆಶ್ರಮಕ್ಕೆ ಬಂದ ಅವನು ಒಂದು ಬುಟ್ಟಿ ಹಣ್ಣಿನ ಬೆಲೆ ಮೂರು ರುಪಾಯಿ ಎಂದು ಹೇಳಿದ. ಅದಕ್ಕೆ ಒಂದು ಕಾಲು ರುಪಾಯಿ ಎಂದು ಹೇಳಲಾಯಿತು. ರೈತ ತುಂಬ ಬೇಡಿಕೊಂಡ, ದುಃಖ ವ್ಯಕ್ತಪಡಿಸಿದ ಆಗ ಒಂದು ವರೆ ರೂಪಾಯಿಗೆ ಬುಟ್ಟಿ ಹಣ್ಣನ್ನು ಖರೀದಿಸಲಾಯಿತು. ಒಂದು ಕಡೆಗೆ ರೈತನಿಗೆ ದುಃಖ ಇನ್ನೊಂದು ಕಡೆಗೆ ಖರೀದಿಸಿದವನು ಸಂತುಷ್ಟ! ರಸ್ತೆಯಲ್ಲಿ ನನ್ನ ಗುಡಿಸಲಿತ್ತು ನಾನು ಆ ರೈತನಿಗೆ ಕೇಳಿದಾಗ ಅವನು ಎಲ್ಲ ಕಥೆ ಹೇಳಿದ. ನೀನು ನಷ್ಟ ಮಾಡಿಕೊಂಡು ಹಣ್ಣನ್ನು ಏಕೆ ಮಾರಿದೆ? ಎಂದು ಕೇಳಿದೆ. ಅವನಂದ "ನನ್ನ ಭಾರವನ್ನು ಹಿಂದಕ್ಕೆ ತೆಗೆದುಕೊಂಡುಹೋಗಿ ಏನು ಮಾಡಲಿ?" ನಾನು ಅವನಿಗೆ ಮೂರು ರುಪಾಯಿಕೊಟ್ಟು ಕಳುಹಿಸಿದೆ. ನಂತರ ಆಶ್ರಮ ವಾಸಿಗಳನ್ನು ಕರೆದು ಹೀಗೆ ಹೇಳಿದೆ, 'ಅವನ ದುಃಖದಲ್ಲಿ ನಿಮ್ಮ ಭಾಗ ಇರಬೇಕೆ ಬೇಡವೆ ಅಥವಾ ಅವನನ್ನು ಲೂಟಿಮಾಡುವ ವಿಚಾರ ಹೊಳೆಯಬೇಕೆ?' ಅವರೆಲ್ಲರೂ ದಯಾಳುರಾಗಿದ್ದರಿಂದ ಕೂಡಲೇ ಅರ್ಥಮಾಡಿಕೊಂಡರು.

ಅನೇಕ ವರ್ಷಗಳಿಂದ ನಡೆದುಕೊಂಡು ಬಂದಿರುವ ನಮ್ಮ ನಾಗರೀಕತೆಯ ಸಂದೇಶವೇನಂದರೆ ಧರ್ಮ ಮತ್ತು ಅರ್ಥ ಒಟ್ಟಿಗೆ ಇರುತ್ತದೆ. ಯಾವ ಧರ್ಮ ಇಡೀ ಅರ್ಥನಿಯಮನ ಮಾಡುವುದಿಲ್ಲವೋ ಅದು ನಿಜವಾದ ಧರ್ಮವಾಗುವುದಿಲ್ಲ. ಅದೇ ರೀತಿ ಯಾವುದು ಧರ್ಮಬುದ್ಧಿಯನ್ನು ಹೊಂದಿರುವುದಿಲ್ಲವೋ ಅದು ನಿಜವಾದ ಅರ್ಥವಾಗುವುದಿಲ್ಲ. ಆದ್ದರಿಂದ ಧರ್ಮ ಮತ್ತು ಅರ್ಥಗಳಲ್ಲಿ ವಿರೋಧವಿರಲು ಸಾಧ್ಯವಿಲ್ಲ.

ಆದರೆ ಇಂದು ವ್ಯವಹಾರದೊಂದಿಗೆ ಧರ್ಮ ಭಾವನೆಯ ಸಂಬಂಧವಿಲ್ಲ ಆ ಮಾತನ್ನೆ ಮರೆತುಬಿಡಲಾಗಿದೆ. ಧರ್ಮವನ್ನು ನಾಲ್ಕು ಗೋಡೆಗಳ ಮಧ್ಯೆ ಕೈದು ಮಾಡಿಡಲಾಗಿದೆ. ಧರ್ಮ ಭಾವನೆ ಮಂದಿರಗಳಲ್ಲಿ ಪ್ರಕಟವಾಗುತ್ತದೆ. ವ್ಯವಹಾರದಲ್ಲಿ ಅದರ ಅಗತ್ಯವನ್ನು ತಿಳಿಯಲಾಗಿಲ್ಲ ಇದು ಬಹಳ ದೊಡ್ಡ ತಪ್ಪು.

ಇಂದು ಜಗತ್ತಿನಲ್ಲಿ ಎರೆಡು ಪ್ರಕಾರದ ಸಂಸ್ಥೆಗಳು ಪ್ರಭಲವಾಗಿವೆ. ಒಂದು ಧರ್ಮಸಂಸ್ಥೆ ಮತ್ತು ಇನ್ನೊಂದು ಶಾಸನ ಸಂಸ್ಥೆ. ಎರೆಡೂ ಸಂಸ್ಥೆಗಳನ್ನು ಲೋಕಸೇವೆಯ ವಿಚಾರಗಳಿಂದ ಸ್ಥಾಪಿಸಲಾಯಿತ್ತು ಅವುಗಳ ಅಗತ್ಯವಿತ್ತು ಆದ್ದರಿಂದ ಸ್ಥಾಪಿತವಾಯಿತು. ಆದರೆ ಇಂದು ಈ ಸಂಸ್ಥೆಗಳು ಸಮಾಜಕ್ಕೆ ತಲೆನೋವಾಗಿವೆ. ಆ ಎರಡು ಸಂಸ್ಥೆಗಳ ಪ್ರಭಾವದಿಂದ ಸಮಾಜವನ್ನು ಬಿಡಿಸುವುದು ಅತ್ಯಂತ ಅಗತ್ಯವಾಗಿದೆ.

ಸಮಾಜದಿಂದ ಧರ್ಮವನ್ನು ಪ್ರತ್ಯೇಕಮಾಡಬೇಕೆಂಬುದು ನನ್ನ ಅರ್ಥವಲ್ಲ, ಬದಲಿಗೆ ಧರ್ಮವಿರಬೇಕೆಂದು ಹೇಳುತ್ತೇನೆ. ಆದರೆ ಈ ಧರ್ಮಸಂಸ್ಥೆಗಳಲ್ಲ. ವಿಚಾರ ಮಾಡುತ್ತಾ ಹೋದಂತೆ ನನ್ನ ಈ ವಿಶ್ವಾಸ ಗಟ್ಟಿಗೊಳ್ಳುತ್ತಾ ಹೋಗುತ್ತಿದೆ. ಧರ್ಮಸಂಸ್ಥೆಗಳು ಯಾವುದೇ ಉದ್ದೇಶಕ್ಕಾಗಿ ಸ್ಥಾಪಿತವಿರಬಹುದಾದರೂ ಇಂದು ಅವುಗಳಿಂದ ಸಮಾಜಕ್ಕೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗುತ್ತಿದೆ.

ಈ ಎಲ್ಲ ಧರ್ಮಗಳು ಅಹಿಂಸೆ, ಶಾಂತಿ, ಪ್ರೇಮ ಇತ್ಯಾದಿಗಳಲ್ಲಿ ವಿಶ್ವಾಸ ಇಡುವಂಥಾದ್ದಾಗಿವೆ. ಆದರೂ ಕೂಡ ಜಗತ್ತಿನಲ್ಲಿ ಶಾಂತಿಸ್ಥಾಪನೆಯ ಕೆಲಸದಲ್ಲಿ ಧರ್ಮ ಸಂಸ್ಥೆಗಳ ಪ್ರಭಾವ ಎಳ್ಳಷ್ಟೂ ಇಲ್ಲವೆಂಬುದನ್ನು ನಾವು ನೋಡುತ್ತೇವೆ ಶ್ರದ್ಧಾವಂತ ಜನರು ಧರ್ಮವನ್ನು ಸ್ಥಾಪಿಸಿದರು. ಅದರ ಆಚರಣೆ ಮಾಡಿದರು, ಆದರೆ ಅದರ ಚಿಂತನೆ – ಮನನದ ಜವಾಬ್ಧಾರಿಯನ್ನು ಧರ್ಮಾಚಾರ್ಯರ ಮೇಲೆ ಹಾಕಿ ತಾವು ಸ್ವಯಂ ಮುಕ್ತರಾದರು! ಇದರಿಂದಾಗಿ ಧರ್ಮಕ್ಕೆ ತುಂಬ ಹಾನಿ ಉಂಟಾಗಿದೆ. ಆದ್ದರಿಂದ ಧರ್ಮವನ್ನು ಸಂಸ್ಥೆಗಳಿಂದ, ಪಾದ್ರಿ, ಪುರೋಹಿತ, ಮುಲ್ಲಾಗಳಿಂದ, ಮಂದಿರ–ಮಸೀದಿ–ಚರ್ಚ್‌ಗಳ ನಾಲ್ಕು ಗೋಡೆಗಳ ಕೈದಿನಿಂದ ಪೂರ್ಣವಾಗಿ ಮುಕ್ತಮಾಡಬೇಕಿದೆ ಮತ್ತು ನಿಜವಾದ ಧರ್ಮಭಾವನೆಯನ್ನು ಸಮಾಜದಲ್ಲಿ ಸರ್ವತ್ರ ಹರಡಬೇಕಿದೆ.

ಸಾಭಾರ ಮೈತ್ರಿ, ಅನು.ಸುಕೌ

# ಭಾಷೆ ಮೀರಿ ಸಾಧನೆ

– ಸುನಂದ ರಂಗನಾಥಸ್ವಾಮಿ

ಸಾಧಿಸುವ ಛಲವೊಂದಿದ್ದರೆ ಸಾಕು; ಅಂದುಕೊಂಡಿದ್ದನ್ನು ಸಾಧಿಸಲು ವಯಸ್ಸು, ಭಾಷೆ, ಗಡಿ ಇವ್ಯಾವು ಅಡ್ಡಿಯಾಗುವುದಿಲ್ಲ ಎಂಬುವುದಕ್ಕೆ ಲೇಖಕಿ ಸುನಂದ ರಂಗನಾಥಸ್ವಾಮಿಯವರು ಸ್ಪಷ್ಟ ನಿದರ್ಶನ. ಮೂಲತಃ ಆಂದ್ರಪ್ರದೇಶದವರಾದ ಇವರು ಕನ್ನಡ ಭಾಷೆಯನ್ನು ಕಲಿತು, ಕನ್ನಡದಲ್ಲಿ ಮಹತ್ವದ ಕೃತಿಗಳನ್ನು ಹಾಗು ಅನೇಕ ಲೇಖನಗಳನ್ನು ರಚಿಸಿ ಶ್ಲಾಘನೀಯ ಸಾಧನೆ ಮಾಡಿದ್ದಾರೆ. ೧೯೪೪೧ರಲ್ಲಿ ಆಂದ್ರದ ಚಿತ್ತೂರು ಜಿಲ್ಲೆ, ಮದನಪಲ್ಲಿ ತಾಲ್ಲೂಕು, ಪೆದ್ದತಿಪ್ಪಸಮುದ್ರಂ ಎಂಬಲ್ಲಿ ಜನಿಸಿದ ಸುನಂದಾರವರು ಸುಮಾರು ೧೫ವರ್ಷಗಳ ಕಾಲ ತೆಲುಗು, ಹಿಂದಿ, ಸಂಸ್ಕೃತದಲ್ಲಿ ವ್ಯಾಸಂಗ ಮಾಡಿ ಬಾಲ್ಯದಿಂದಲೂ ಇವರಿಗೆ ಕಥೆ, ಕವನ, ಮತ್ತು ಆಧ್ಯಾತ್ಮಿಕ ಲೇಖನಗಳನ್ನು ಓದುವುದೆಂದರೆ ಎಲ್ಲಿಲ್ಲದ ಆಸಕ್ತಿ.

೧೯೬೨ ಮಾರ್ಚ್ ಒಂದರಂದು ಬೆಂಗಳೂರಿನ ರಂಗನಾಥಸ್ವಾಮಿಯವರನ್ನು ವಿವಾಹವಾಗಿ ಕರ್ನಾಟಕದ ಸೊಸೆಯಾದ ನಂತರ ಸುನಂದ ಕನ್ನಡ ಕಲಿತು ಭಾರತ ದರ್ಶನ ಸಂಸ್ಥೆಯ ಮಾಸಪತ್ರಿಕೆ, ವಿಶೇಷಾಂಕಗಳಿಗೆ ಸತತ ೪೫ವರ್ಷಗಳಿಂದಲೂ ಲೇಖನಗಳನ್ನು ಬರೆಯುತ್ತಿದ್ದಾರೆ. ಅಲ್ಲದೆ ಅಕ್ಷರಮಾಲಾ ರಾನಾಮಾವಳಿ, ಶ್ರೀನಿವಾಸ ನಾಮಾವಳಿ ಹಾಗೂ ದೇವೀಸ್ತೋತ್ರವನ್ನು ರಚಿಸುವ ಮೂಲಕ ಸ್ತವನ ಸಾಹಿತ್ಯ ಲೋಕದಲ್ಲಿ ಕೈಯಾಡಿಸಿದ್ದಾರೆ.

ಸುನಂದ ರಂಗನಾಥಸ್ವಾಮಿಯವರು ಸುಮಾರು ೭೦೦ ವರ್ಷಗಳ ಹಿಂದೆ ಮಹಾಕವಿ ಪೋತನಾಮಾತ್ಯರು ತೆಲುಗಿನಲ್ಲಿ ರಚಿಸಿದ 'ಪೋತನ ಭಾಗವತ'ವೆಂದೇ ಪ್ರಸಿದ್ಧಿಯಾದ ಮಹಾಗ್ರಂಥವನ್ನು ಪದ್ಯ, ಬಾವಾರ್ಥ ಸಹಿತ, ಭಾಗವತ ಮಹಿಮೆ ಹಾಗೂ ಪೋತನರ ಜೀವನಚರಿತ್ರೆಗಳೊಂದಿಗೆ ೩ ಸಂಪುಟಗಳೊಂದಿಗೆ "ಕನ್ನಡ ಅವತರಣಿಕೆ" ಎಂಬ ಶೀರ್ಷಿಕೆಯಲ್ಲಿ ಹೊರತಂದ ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿ ಹೆಗ್ಗಳಿಕೆ ಇವರದ್ದು. ತೆಲುಗಿನಲ್ಲಿ ಉಪ್ಪಲೂರು ಕಾಮೇಶ್ವರ ವಿರಚಿತ 'ವಾಲ್ಮೀಕಿ ರಾಮಾಯಣ'ವನ್ನು ಸರಳ, ಸುಂದರವಾಗಿ ಕನ್ನಡಕ್ಕೆ ಅನುವಾದ ಮಾಡಿದ್ದು, ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ಅಷ್ಟೇ ಅಲ್ಲದೇ, ಕನ್ನಡದ ಪ್ರಸಿದ್ಧ ಕಾದಂಬರಿಕಾರ ಎಸ್. ಎಲ್. ಬೈರಪ್ಪನವರ "ಸಾರ್ಥ" ಕಾದಂಬರಿಯನ್ನು ತೆಲುಗಿಗೆ ಅನುವಾದ ಮಾಡಿದ್ದಾರೆ.

'ಮನಸ್ಸಿದ್ದರೆ ಮಾರ್ಗ' ಎಂಬಂತೆ ವಯೋಮಾನದ ಸವಾಲುಗಳನ್ನು ಮೆಟ್ಟಿನಿಂತು ಅಕ್ಷರ ಕೃಷಿಯಲ್ಲಿ ಅಹರ್ನಿಶಿ ತೊಡಗಿಸಿಕೊಂಡಿರುವ ಸುನಂದರವರು ಪ್ರಸ್ತುತ ಭವ್ಯ

ಭಾರತದ ಮಹಾನ್ ಋಷಿಗಳ(೫೫-೬೦) ಜನನ, ಜೀವನ, ಅಪಾರ ತಪಸ್ ಸಾಧನೆ ಸಂದೇಶಗಳಿರುವ ಪುಸ್ತಕಗಳನ್ನು ಹೊರತರಲು ಶ್ರಮಿಸುತ್ತಿದ್ದಾರೆ. ಜೊತೆಗೆ ಹಲವಾರು ಗ್ರಂಥಗಳನ್ನು ಪರಿಷ್ಕರಣೆ ಮಾಡಿ ಮುನ್ನುಡಿ ಬರೆಯುವ ಮೂಲಕ ನಿರಂತರ ಸಾಹಿತ್ಯಸೇವೆಯಲ್ಲೇ ತಮ್ಮ ಖುಷಿಯನ್ನು ಕಂಡುಕೊಳ್ಳುತ್ತದ್ದಾರೆ. ಸುನಂದ ಅವರ ಕನ್ನಡ ಪ್ರೀತಿ; ಕನ್ನಡದವರೇ ಆಗಿದ್ದರು ಕನ್ನಡ ಮಾತನಾಡದೆ ಅನ್ಯ ಭಾಷೆಯ ವ್ಯಾಮೋಹಕ್ಕೆ ಸಿಲುಕಿ ತಾಯಿ ಭಾಷೆಯನ್ನು ಕಡೆಗಣಿಸುತ್ತಿರುವ ಕನ್ನಡಿಗರನ್ನು ನಾಚಿಸುವಂತಿದೆ.

ಸಾಧರ – ಕಸ್ತೂರಿ

---

# ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನವರಿ ತಿಂಗಳಲ್ಲಿ 'ಹೊಸ ಜೀವನ ದಾರಿ' ಕೇಂದ್ರದಲ್ಲಿ ಬೆಂಗಳೂರಿನ ನಾಗಾರ್ಜುನ ಕಾಲೇಜು ವಿದ್ಯಾರ್ಥಿಗಳ ಶಿಬಿರ ನಡೆಯಿತು. ೪೦ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಆ ಕೇಂದ್ರದಲ್ಲಿರುವ 'ನೆನೆಬನ'ದಲ್ಲಿರುವ ಗಿಡಗಳಿಗೆ ನೀರು ಹಾಕುವುದರ ಮೂಲಕ ಶ್ರಮದಾನ ಮಾಡಿದರು. ಪಾಂಡವಪುರ ವಿಭಾಗದ ವಿಭಾಗಾಧಿಕಾರಿದವರಾದ ಡಾ? ಎಚ್.ಎನ್.ನಾಗರಾಜುರವರು ಕೂಡ ಶ್ರಮದಾನದಲ್ಲಿ ಭಾಗವಹಿಸಿ ತಮ್ಮ ಪರಿಸರಪ್ರೇಮವನ್ನು ತೋರಿಸಿದರು. ವಿದ್ಯಾರ್ಥಿಗಳೊಂದಿಗೆ ವಿಚಾರ ವಿನಿಮಯ ನಡೆಸಿದರು. ಜನವರಿ ೩೦ ಹುತಾತ್ಮರ ದಿನಾಚರಣೆಯ ಅಂಗವಾಗಿ ಮೈಸೂರಿನಲ್ಲಿರುವ ವಕೀಲರ ಸಂಘದಲ್ಲಿ ನಡೆದ ಸಭೆಯಲ್ಲಿ ಸುರೇಂದ್ರ ಕೌಲಗಿ ಅವರು ಭಾಗವಹಿಸಿದರು. ಜನಪದ ಸೇವಾ ಟ್ರಸ್ಟಿನ ಕಾರ್ಯಕರ್ತರಾದ; ಅನ್ನದಾನಿ (ಅಥೋಣಿ), ರವಿ, ಅಶೋಕ, ಸುರೇಶ, ರಘು, ಇವರೆಲ್ಲರೂ ಗಾಂಧೀಜೀಯವರ ಆಶ್ರಮ ನೋಡಲು ಹಾಗೂ ಹೆಚ್ಚಿನ ವಿಷಯ ತಿಳಿಯಲು ಸೇವಾ ಗ್ರಾಮಕ್ಕೆ ಹೋಗಿ ಬಂದರು. ಅವರಿಗೆ ಮಾರ್ಗದರ್ಶಕರಾಗಿ ಸುಮನಸ ಕೌಲಗಿ ಹೋಗಿದ್ದರು ತುಮಕೂರ ಬಳಿ ಇರುವ ಟಿ.ವಿ.ಎಸ್. ಶಾಲೆಯ ಮಕ್ಕಳು ಒಂದು ದಿನದ ಶಿಬಿರವನ್ನು ಹೊಸ ಜೀವನ ದಾರಿ ಕೇಂದ್ರದಲ್ಲಿ ನಡೆಸಿದರು ಶಿಬಿರದ ಸಂಚಾಲನೆಯನ್ನು ಪರಿಸರವಾದಿ ಮನು ನಡೆಸಿಕೊಟ್ಟರು. ಪ್ರತಿ ವರ್ಷ ಶ್ರೀರಂಗಪಟ್ಟಣ ಬಳಿಇರುವ ಪಶ್ಚಿಮವಾಹಿನಿ ಕ್ಷೇತ್ರದಲ್ಲಿ ಸರ್ವೋದಯ ಮೇಳ ನಡೆಯಿತು. ಅದರಲ್ಲಿ ಟ್ರಸ್ಟ್ ಬಾಗಿಯಾಗಿತ್ತು. ಜನಪದ ಸೇವಾ ಟ್ರಸ್ಟ್ ನಡೆಸುತ್ತಿರುವ ಖಾದಿ ಉತ್ಪಾದನ ಕೇಂದ್ರವನ್ನು ಹೆಚ್ಚು ಗ್ರಾಹಕ ಸ್ನೇಹಿಯನ್ನಾಗಿ ಮಾಡಲು ಪ್ರಯತ್ನಿಸಲಾಗುತ್ತಿದೆ. ಆ ಪ್ರಯತ್ನದ ಅಂಗವಾಗಿ ತಮಿಳುನಾಡಿನ ದಿಂಡಿಗಲ್‌ನಲ್ಲಿ ನಡೆದ 'ಖಾದಿ ಮುಂದಿನ ಹಜ್ಜೆ' ಎಂಬ ವಿಷಯದಲ್ಲಿ ನಡೆದ ವಿಚಾರ ಘೋಷ್ಠಿಯಲ್ಲಿ ಸಂತೋಷ ಮತ್ತು ಸುಮನಸ ಭಾಗವಹಿಸಿದ್ದರು. ಸುಸ್ಥಿರ ಬದುಕು ಆಂದೋಲನದ ಅಂಗವಾಗಿ ಇತ್ತೀಚ್ಚೀಗೆ ಧಾರವಾಡ ಜಿಲ್ಲೆಯ ಗರಗ ಬಳಿ ನಡೆದ ಪಾದಯಾತ್ತೆಯಲ್ಲಿ ಟ್ರಸ್ಟ್ ಕಾರ್ಯಕರ್ತರು ಭಾಗವಹಿಸಿದ್ದರು.

# ವಿಜ್ಞಾನದ ಯುಗದಲ್ಲಿ ಸರ್ವೋದಯ ಅತಿ ಆದರ್ಶವಾದಿಯಲ್ಲ

– ವಿನೋಬಾ

ಪ್ರೊಟೆಸ್ಟಂಟ್ ಚರ್ಚಿನ ಬಿಷಪ್ ವಿನೋಬಾರವರನ್ನು ಪ್ರಶ್ನಿಸಿದ, ಆ ಪ್ರಶ್ನೆಗೆ ವಿನೋಬಾ ಕೊಟ್ಟ ಉತ್ತರ ಕೆಳಗಿನಂತಿದೆ.

**ಪ್ರಶ್ನೆ : ನಮಗೆ ನಿಮ್ಮ ಸಂದೇಶವೇನು ?**

ಉತ್ತರ : ತಂದೆ ತಾಯಿ ಯಾವುದೇ ಧರ್ಮದವರಾಗಿರಲಿ, ಹದಿನೆಂಟು ವರ್ಷದವನಾದಮೇಲೆ ಹುಡುಗನಿಗೆ ತನ್ನ ಧರ್ಮ ಆಯ್ಕೆ ಮಾಡಿಕೊಳ್ಳುವ ಅಧಿಕಾರ ಇರಬೇಕು. ಇಂದು ತಂದೆಯ ಧರ್ಮವೇ ಮಗನ ಧರ್ಮವಾಗಿರುತ್ತದೆ. ಮನುಷ್ಯ ಮಾತ್ರನಿಗೆ ತನ್ನ ಧರ್ಮವನ್ನು ಆಯ್ಕೆ ಮಾಡುವ ಅಧಿಕಾರವಿದೆ. ಧರ್ಮ ಆಧ್ಯಾತ್ಮಿಕ ವಸ್ತು. ಜಾತಿ ಭೌತಿಕ. ಇಂದು ತಂದೆ ತಾಯಿಗಳಿಂದ ಮಗನಿಗೆ ಧರ್ಮ ಬರುವುದರಿಂದ ಧರ್ಮದ ಸಂಖ್ಯೆ ಸಹಜವಾಗಿ ಬೆಳೆಯುತ್ತದೆ.

ಇಸಾಯಿ ಧರ್ಮ ಯುರೋಪಿಗೆ ತಲುಪುವ ಬಹಳ ಮೊದಲೆ ಭಾರತಕ್ಕೆ ತಲುಪಿತ್ತು. ಯೇಸುವಿನ ಮೃತ್ಯುವಿನ ಐವತ್ತು ವರ್ಷಗಳ ಮುಂಚೆಯೇ ಸೇಂಟ್ ಥಾಮಸ್ ಕೇರಳದ ತೀರಕ್ಕೆ ಬಂದಿದ್ದ. ಆದ್ದರಿಂದ ಭಾರತದ ಮೇಲೆ ಇಸಾಯಿ ಧರ್ಮದ ಅಧಿಕಾರವಿದೆ. ಭಾರತ ಎಲ್ಲರನ್ನೂ ಸ್ವಾಗತಿಸುತ್ತದೆ. ಇಸಾಯಿ, ಪಾರ್ಸಿ, ಜ್ಯೂ, ಮುಸಲ್ಮಾನ ಎಲ್ಲರ ಸ್ವಾಗತವನ್ನು ಭಾರತ ಮಾಡಿದೆ. ಸೇಂಟ್ ಪಾಲರ ಒಂದು ಶಬ್ದ ನನಗೆ ಬಹಳ ಒಪ್ಪಿಗೆಯಾಗಿದೆ – 'ಮಿನಿಸ್ಟ್ರಿ ಆಫ್ ರಿಕನ್ಸಿಲಿಯೇಷನ್' (ಜೋಡಿಸುವ ಸೇವೆ) ಇಸಾಯಿ ಜನರ ಮುಖ್ಯ ಮಿಷನ್ ಇದೇ ಆಗಬೇಕು – ಇಡೀ ಜಗತ್ತನ್ನು ಜೋಡಿಸುವ ಕೆಲಸ.

**ಪ್ರಶ್ನೆ : ನಿಮ್ಮ ದೃಷ್ಟಿಯಲ್ಲಿ ಇಸಾಯಿ ಧರ್ಮದ ದೊಡ್ಡ ದೋಷ ಯಾವುದು?**

ಉತ್ತರ : ಈ ವಿಷಯದಲ್ಲಿ ನನಗೆ ಬಹಳ ನಿರಾಶೆಯಿದೆ. ಭಿನ್ನ-ಭಿನ್ನ ಧರ್ಮದವರ ಮನಸ್ಸನ್ನು ನಾನು ನೋಡಿದ್ದೇನೆ ಅದು ಬಹಳ ದುಃಖದಾಯಕವಾಗಿದೆ. ಧರ್ಮ ಮತ್ತು ಧಾರ್ಮಿಕ ಮನೋಬಾವನೆಯನ್ನು ಅದರ ಮೇಲೆ ಹೇರಲಾಗಿತ್ತು. ಇನ್ನು ಅವು ಹೋಗಬೇಕು ಎಂದು ನಾನು ಘೋಷಿಸಿದ್ದೆ. ಅವುಗಳ ಸ್ಥಳದಲ್ಲಿ ವಿಜ್ಞಾನ ಮತ್ತು ಆಧ್ಯಾತ್ಮ ಬರಬೇಕಾಗುವುದು. ಆಧ್ಯಾತ್ಮ ಎಂದರೆ ಎಲ್ಲ ಧರ್ಮಗಳ ಸಾರ. ಒಂದು ಕಾಲದಲ್ಲಿ ಧರ್ಮಗಳು

ಜೋಡಿಸುವ ಕೆಲಸ ಮಾಡುತ್ತಿದ್ದವು. ವಿಶ್ವ ವಿಜ್ಞಾನದ ಕಾರಣ ಒಂದಾಗಿರುವಾಗ ಈಗ ಧರ್ಮಗಳು ಮುರಿಯುವ ಕೆಲಸವನ್ನು ಮಾಡುತ್ತಿವೆ ! ಮೊದಲು ಸಮೂಹಗಳು ಬೇರೆಬೇರೆಯಾಗಿದ್ದವು. ಒಬ್ಬರು ಇನ್ನೊಬ್ಬರನ್ನು ಗುರುತಿಸುತ್ತಿರಲಿಲ್ಲ ಆಗ ಧರ್ಮಗಳು ಎಲ್ಲರನ್ನು ಜೋಡಿಸುವ ಕೆಲಸ ಮಾಡಿದವು. ಒಂದು ಧರ್ಮ ಇನ್ನೊಂದು ಧರ್ಮದ ಜೊತೆಗೆ ಜಗಳವಾಡುತ್ತದೆ. ಒಂದೇ ಧರ್ಮದಲ್ಲಿ ಒಳಗೊಳಗೆ ಜಗಳಗಳಿವೆ ಐಯಲೆಂಡ್ ನಲ್ಲಿ ರೋಮನ್ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ್ ಇಸಾಯಿಗಳ ಮಧ್ಯೆ ಯುದ್ಧ ನಡೆಯುತ್ತಿದೆ. ಮುಸಲ್ಮಾನರಲ್ಲಿ ಶಿಯಾ ಮತ್ತು ಸುನ್ನಿ ಎಂಬ ಎರಡು ವಿಭಾಗಗಳಿವೆ. ಎರಡೂ ಪ್ರತ್ಯೇಕವಾಗಿ ಮೆರವಣಿಗೆ ತೆಗೆಯುತ್ತವೆ. ಆಗ ಅವರಲ್ಲಿ ಹೊಡೆದಾಟ ಆಗುತ್ತದೆ, ಜಗಳವಾಗುತ್ತದೆ. ನಾನು ಕೇರಳಕ್ಕೆ ಹೋಗಿದ್ದೆ ಅಲ್ಲಿ ರಿ ಕನ್ಸಿಲಿಯೇಷನ್ ಸಮೂಹದ ಜನರನ್ನು ಭೇಟಿ ಮಾಡಿದ್ದೆ. "ನಾನು ನಿಮ್ಮೊಂದಿಗೆ ಪ್ರಾರ್ಥನೆಯಲ್ಲಿ ಕುಳಿತುಕೊಳ್ಳಬಹುದ? ನೀವು ನನ್ನ ಹಿಂದೂ ಪ್ರಾರ್ಥನೆಯಲ್ಲಿ ಕುಳಿತುಕೊಳ್ಳುತ್ತೀರ" ಎಂದು ಕೇಳಿದೆ. ಅವರು ಸಾಧ್ಯವಿಲ್ಲ ಎಂದು ಹೇಳಿದರು. ಹೋಗಲಿ ನನ್ನ ಮಾತು ಇರಲಿ ರೋಮನ್ ಕ್ಯಾಥೋಲಿಕ್ ಮತ್ತು ಪ್ರೊಟೆಸ್ಟಂಟ್ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತೀರ ಎಂದು ಕೇಳಿದೆ. ಅದಕ್ಕೆ ಅವರು ಮಾಡುವುದಿಲ್ಲವೆಂದು ಉತ್ತರಿಸಿದರು. ಕೆಲವು ಗೊತ್ತು ಮಾಡಿದ ನಿರ್ಧಿಷ್ಟ ದಿನಗಳಲ್ಲಿ ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತೇವೆ ಎಂದು ಹೇಳಿದರು. ಹಿಂದೂಗಳಲ್ಲಿಯ ಜಗಳದ ವಿಷಯವನ್ನೆಂತು ಹೇಳಲಿ. ಶೈವ, ವೈಷ್ಣವ, ಶಾಕ್ತ ಮುಂತಾದ ಅನೇಕ ಪ್ರಕಾರಗಳು ಅನೇಕ ಜಗಳಗಳು !

**ಪ್ರಶ್ನೆ : ಧರ್ಮಗಳ ಸಮನ್ವಯ ಆಗಲು ಸಾಧ್ಯವೆ ?**

ಉತ್ತರ : ಧರ್ಮ ಔಟ್ ಡೇಟೆಡ್ (ಕಾಲಬಾಹ್ಯ) ಆಗಿದೆ. ಸಮನ್ವಯ ಆಗಲು ಸಾಧ್ಯವಿದೆ. ಅಂದರೆ ಧರ್ಮಗಳ ಸಾರವನ್ನು ತೆಗೆದು ಕೊಳ್ಳಬಹುದು. ಸಾರವೆಂದರೆ ಆಧ್ಯಾತ್ಮ; ಪರಮೇಶ್ವರನನ್ನು ಒಪ್ಪುವುದು. ಮತ್ತು ಸತ್ಯ – ಅಹಿಂಸೆ ಇತ್ಯಾದಿ ನೀತಿ ಧರ್ಮಗಳನ್ನು ಒಪ್ಪುವುದು ಎಲ್ಲ ಧರ್ಮಗಳ ಸಾರವಾಗಿದೆ. ಎರಡೂ ಸೇರಿ ಆಧ್ಯಾತ್ಮವೆಂದೆನ್ನಬಹುದು. ಧರ್ಮದ ಬದಲಿಗೆ ಅದರ ಸಾರವನ್ನೇ ತೆಗೆದು ಕೊಳ್ಳಬೇಕು. ಅದಕ್ಕೆ ನಾನು ವೇದಾಂತವೆಂದು ಹೆಸರಿಸಿದ್ದೇನೆ. ಸಾರ ತೆಗೆದುಕೊಂಡಾದಮೇಲೆ ವೇದ ಇಲ್ಲವಾಗುತ್ತದೆ; ಕುರಾನಾಂತ ಅಂದರೆ ಸಾರ ತೆಗೆದುಕೊಂಡಾದಮೇಲೆ ಕುರಾನ್ ಇಲ್ಲವಾಗುತ್ತದೆ; ಬೈಬಲಾಂತ. ಸಾರ ತೆಗೆದು ಕೊಂಡಾದಮೇಲೆ ಬೈಬಲ್ ಮುಕ್ತಾಯ ! ಸಾರ ತೆಗೆದುಕೊಳ್ಳಬೇಕು, ಅಸಾರ

ಬಿಡಬೇಕು. ಹಾಗಿಲ್ಲವಾದರೆ ಗೌಣ ವಿಷಯಗಳ ಮೇಲೆ ಜಗಳವಾಗುತ್ತಲೇ ಇರುವುದು.

**ಪ್ರಶ್ನೆ : ಸರ್ಕಾರ ಮತ್ತು ಕಾನೂಗಳ ಅಧಿಕಾರ ಸಮಾಪ್ತವಾಗುವ ಸಂಭವದ ಮಾತನ್ನು ಆಡುತ್ತಿರುವಾಗ, ಸರ್ವೋದಯ ವಿಚಾರದಲ್ಲಿ ನೀವು ಅತಿ ಆದರ್ಶವಾದಿಯಾಗಿಲ್ಲವೆ?**

ಉತ್ತರ : ಇಂದು ಜಗತ್ತಿನಲ್ಲಿ ಕಾನೂನು ಮತ್ತು ಸರ್ಕಾರಗಳೇ ಬಲಿಷ್ಠವಾಗಿವೆ. ಆದರೆ ಭವಿಷ್ಯದ ದಿನಗಳಲ್ಲಿ ಜಗತ್ತಿನಲ್ಲಿ ಜನತೆಯ ಶಕ್ತಿ ಉಂಟಾಗಬೇಕೆ ಹೊರತು ಹೇರಲಾದ ಅಧಿಕಾರವಲ್ಲ. ಇದು ನನ್ನ ಆದರ್ಶ. ಇಲ್ಲವಾದರೆ ಏನಾಗುವುದು? ಒನ್ ವರ್ಲ್ಡ್ (ವಿಶ್ವ ರಾಜ್ಯ) ಆಗುವುದಿಲ್ಲ. ಅನೇಕ ಸರ್ಕಾರಗಳ ಸ್ಥಾಪನೆಯಾಗುವುದು ಅವು ತಮ್ಮ ತಮ್ಮಲ್ಲಿ ಜಗಳಾಡುವುವು ಆದ್ದರಿಂದ ವಿಶ್ವರಾಜ್ಯ ಒಂದುಕಡೆ ಇರಬೇಕು; ಮತ್ತು ಇನ್ನೊಂದು ಕಡೆ ಜನತೆ ತಮ್ಮ ಕಾಲುಮೇಲೆ ನಿಲ್ಲಬೇಕು. ಇಂದು ವಿಜ್ಞಾನದ ಕಾರಣದಿಂದ ಮನುಷ್ಯ-ಮನುಷ್ಯರು ಹತ್ತಿರ ಬಂದಿದ್ದಾರೆ. ವಿಜ್ಞಾನ ಇಲ್ಲದೇ ಹೋಗಿದ್ದರೆ ಸರ್ವೋದಯ ವಿಚಾರ ಅತಿ ಆದರ್ಶವಾದಿ ಆಗುತ್ತಿತ್ತು. ಆದರೆ ಇಂದು ಹಾಗಿಲ್ಲ. ಅದು ಕೂಡಲೇ ಆಗುವುದು. ನೀವು ನಿಮ್ಮ ಕಾಲ ಮೇಲೆ ನೀವು ನಿಲ್ಲಿ ಮತ್ತು ಸರ್ಕಾರದ ಕಾನೂನಿಗೆ ಗ್ರಾಮದಲ್ಲಿ ಪ್ರವೇಶ ಕೊಡಬೇಡಿ ಎಂದು ಜನರಿಗೆ ಹೇಳುವುದು ಅಗತ್ಯವಾಗಿದೆ. ಈ ಆದರ್ಶವಾದ ಇಂದು ಅತ್ಯಂತ ಮಹತ್ವದ್ದಾಗಿದೆ. ಒಂದು ಕೆನ್ನಗೆ ಯಾರಾದರು ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರಿಸಿ ಎಂದು ಯೇಸು ಹೇಳಿದ ಮಾತು ಕೂಡ ಅತಿ ಆದರ್ಶವಾದವೇ ಆಗಿದೆ. ಇದು ಪರ್ಫೆಕ್ಟ್ ಸೊಸೈಟಿ (ಆದರ್ಶ ಸಮಾಜದಲ್ಲಿ) ಮಾತ್ರ ಸಾಧ್ಯ ಎಂದು ಇಸಾಯಿಗಳು ಕೂಡಾ ಹೇಳುತ್ತಾರೆ. ಆದರೂ ಕೂಡ ಯೇಸು ಹೇಳಿದ ಮಾತು ಅತ್ಯಂತ ಅವಶ್ಯಕ ಎಂದು ನಾನು ತಿಳಿಯುತ್ತೇನೆ. ಅದೇ ರೀತಿ ಸರ್ವೋದಯ ವಿಚಾರದ ಆದರ್ಶ ಅತ್ಯಂತ ಅವಶ್ಯಕ. ಹಾಗಿಲ್ಲವಾದಲ್ಲಿ ಯುದ್ಧಗಳಾಗುವವು ಮತ್ತು ಮನುಷ್ಯನ ಅಂತ್ಯವಾಗುವುದು ! ಆದ್ದರಿಂದ ಅಹಿಂಸೆಗೆ ಇಂದು ವ್ಯವಹಾರೀಕ ಮೌಲ್ಯ ಪ್ರಾಪ್ತವಾಗಿದೆ. ಒಂದು ಕಾಲದಲ್ಲಿ ಅದು ಆದರ್ಶವಾಗಿತ್ತು, ಇಂದು ವ್ಯವಹಾರೀಕವಾಗಿದೆ. ಏಕೆಂದರೆ ಇಂದು ಯಾವ ಪ್ರಕಾರದ ಶಸ್ತ್ರಾಸ್ತ್ರಗಳು ಮತ್ತು ಅಣು ಅಸ್ತ್ರಗಳು ತಯಾರಾಗಿವೆಯೋ ಎಂಬುದನ್ನು ನೋಡಿ ಜನರು "ಅಹಿಂಸೆಯನ್ನು ಸ್ವೀಕರಿಸಿ ಇಲ್ಲವೇ ಮಾನವ ಕುಲದ ಸಂಹಾರವನ್ನು ಸ್ವೀಕರಿಸಿ ಎಂಬುದಾಗಿ ಹೇಳುತ್ತಾರೆ" ಆದ್ದರಿಂದ ಅಹಿಂಸೆ ವ್ಯಾವಹಾರಿಕವಾಗುತ್ತಲಿದೆ.

**ಪ್ರಶ್ನೆ : ಜಗತ್ತಿನ ಎಲ್ಲ ಕೆಟ್ಟತನಗಳು ಒಮ್ಮೆಲೆ ಮುಕ್ತಾಯವಾಗುತ್ತವೆ?**

ಉತ್ತರ : ಕೆಟ್ಟತನಗಳು ಮುಕ್ತಾಯವಾಗುವ ಅಗತ್ಯವಿಲ್ಲ. ಅವು ನಿಯಂತ್ರಣದಲ್ಲಿರಬೇಕು ಮಾನವನಲ್ಲಿ ಒಳ್ಳೆಯತನವು ಇದೆ ಮತ್ತು ಕೆಟ್ಟತನವೂ ಇದೆ. ಒಳ್ಳೆಯತನದ ನಿಯಂತ್ರಣದಲ್ಲಿ ಕೆಟ್ಟತನವಿರಬೇಕು. ಇಂದು ಕೆಟ್ಟತನದ ನಿಯಂತ್ರಣದಲ್ಲಿ ಒಳ್ಳೆಯತನವಿದೆ! ಕೆಟ್ಟ ಜನರು ಸಂಘಟಿತರಾಗುತ್ತಾರೆ. ಒಳ್ಳೆಯ ಜನ ಸಂಘಟಿತರಾಗುವಿದಿಲ್ಲ ಇಂತ ಸ್ಥಿತಿ ಇಂದಿನದು. ಸಜ್ಜನರ ನಿಯಂತ್ರಣದಲ್ಲಿ ದುರ್ಜನರು ಇರಬೇಕು. ಪ್ರತಿಯೊಬ್ಬ ಮನುಷ್ಯನಲ್ಲಿ ಲೋಕಭಾವನೆ ಇರುತ್ತದೆ. ಜನರು ಆಡುವ ಮಾತು ಲೋಕ ಭಾವನೆಯಾಗುತ್ತದೆ. ಅದರಿಂದಾಗಿ ಕೆಟ್ಟದರಮೇಲೆ ನಿಯಂತ್ರಣವಿರುತ್ತದೆ. ಇಂದು ಕಳ್ಳತನ ಮಾಡುವವನಿಗೆ ಕಾನೂನಿನ ಶಿಕ್ಷೆಯಾಗುತ್ತದೆ. ಕಾನೂನನ್ನು ತೆಗೆದುಹಾಕಲಾಗಿದೆ ಎಂದು ತಿಳಿಯಿರಿ. ಆಗ ಏನಾಗುವುದು? ಕಳ್ಳತನ ಹೆಚ್ಚಾಗುವುದೇ? ಶಿಕ್ಷೆಯ ಭಯದಿಂದ ಕಳ್ಳತನವಾಗುವುದಿಲ್ಲ ಎಂಬ ಕಲ್ಪನೆ ತಪ್ಪು ಕಲ್ಪನೆ. ಮನುಷ್ಯನಲ್ಲಿ ನಾಚಿಕೆಯ ಭಾವನೆ ಇರುವುದರಿಂದ ಕಳ್ಳತನಗಳು ಆಗುವುದಿಲ್ಲ. ಸರ್ಕಾರ ಮತ್ತು ಕಾನೂನು ಇಲ್ಲದಿದ್ದರೆ ಕಳ್ಳತನಗಳು ಆಗಲಾರಂಭಿಸುತ್ತವೆ ಎಂದೇನೂ ಅಲ್ಲ. ಅದಕ್ಕೆ ತದ್ವಿರುದ್ಧವಾಗುತ್ತದೆ. ಗ್ರಾಮದ ಸಮಾಜ ಸಂಘಟಿತಗೊಳ್ಳುವುದು. ಯಾರಾದರು ಕಳ್ಳತನ ಮಾಡಿದರೆ ಅವನನ್ನು ಏಕೆ ಕಳ್ಳತನ ಮಾಡಿದೆ ಎಂದು ಕೇಳಲಾಗುವುದು. ನನಗೆ ಊಟ ಸಿಗಲಿಲ್ಲವಾದ್ದರಿಂದ ಕಳ್ಳತನ ಮಾಡಿದೆ ಎಂದು ಹೇಳುವನು. ಆಗ ಅವನಿಗೆ ಸಮಾಜ ಹೇಳುವುದು "ಬಾ, ನಿನಗೆ ಊಟವನ್ನು ಕೊಡುತ್ತೇವೆ ಮತ್ತು ಕೆಲಸವನ್ನೂ ಕೊಡುತ್ತೇವೆ. ಆಗ ಕಳ್ಳತನಗಳ ಮೇಲೆ ನಿಯಂತ್ರಣವಿರುವುದು". ಆದ್ದರಿಂದ ವಿಜ್ಞಾನದ ಯುಗದಲ್ಲಿ ಸರ್ವೋದಯವಿಚಾರ ಅತಿ ಆದರ್ಶವಾದಿ ಆಗುವುದಿಲ್ಲ, ವ್ಯಾವಹಾರಿಕವಾಗುತ್ತದೆ.

**ಅನು : ಸುಕೌ**

# ಬದುಕು ಕಟ್ಟುವ ಅನುಭವಗಳು

– ಡಾ. ಕೆ. ಜಗದೀಶ್ ಪೈ

ಮನುಷ್ಯ ಎಷ್ಟೇ ಪದವಿ ಗಳಿಸಿದರೂ ಅನುಭವ ಇಲ್ಲದಿದ್ದರೆ ಆ ಪದವಿಗೆ ಬೆಲೆಯಿಲ್ಲ. ಯಾವುದೇ ವಿದ್ಯೆಯ ಬಗ್ಗೆ ಅನುಭವವಿಲ್ಲದಿದ್ದರೆ ಕಲಿತದ್ದು ಪುಸ್ತಕದ ಬದನೆಕಾಯಿ ಆಗುತ್ತದೆ. ವಿಶ್ವವಿದ್ಯಾಲಯದಲ್ಲಿ ಕಲಿಯುವುದಕ್ಕಿಂತಲೂ ಹೆಚ್ಚು ಅನುಭವದಿಂದ ಕಲಿಯುವುದು ನಮ್ಮ ಜೀವನದಲ್ಲಿ ಇರುತ್ತದೆ. ದೂರಶಿಕ್ಷಣದಿಂದ ಅಡುಗೆ ಕಲಿಯಲು ಸಾಧ್ಯವೇ? ಅಂಚೆ ತೆರಪಿನ ಶಿಕ್ಷಣದಲ್ಲಿ ಈಜುವುದನ್ನು ಕಲಿಯಲಾಗುತ್ತದೆಯೇ? ವಿದ್ಯೆ ನಮಗೆ ದಾರಿ, ದಿಕ್ಕು ತೋರಿಸಬಹುದು. ಆದರೆ ಆ ದಾರಿಯಲ್ಲಿ, ಆ ದಿಕ್ಕಿನತ್ತ ಸ್ವತಃ ನಡೆಯಬೇಕು.

ಇಂದು ರೋಗಿಗಳನ್ನು ಪ್ರತ್ಯಕ್ಷವಾಗಿ ಪರೀಕ್ಷಿಸದೆ ಕೇವಲ ಅಂತರ್ಜಾಲದಲ್ಲಿ ಬರುವ ಮಾಹಿತಿಗಳನ್ನೂ ಪರೀಕ್ಷಾ ವರದಿಗಳನ್ನೂ ನೋಡಿ ಚಿಕಿತ್ಸೆ ನೀಡುವ ಯುಗ ಆರಂಭವಾಗಿದೆ. ಪಾಠ ಮಾಡುವ ಪ್ರತ್ಯಕ್ಷ ಗುರುಗಳಿಲ್ಲದೆ ಕೇವಲ ಗಣಕಯಂತ್ರದಿಂದ ಮಾಹಿತಿ ಪಡೆದು ಪರೋಕ್ಷ ಗುರುಗಳಿಂದ ಕಲಿಯುವ ಕಾಲ ಪ್ರಾರಂಭವಾಗಿದೆ. ಹೆರಿಗೆಯ ನೋವನ್ನು ಅನುಭವಿಸದೆ ಅರವಳಿಕೆ ಮದ್ದನ್ನು ಚುಚ್ಚಿಸಿಕೊಂಡು ಮಕ್ಕಳನ್ನು ಹೆರುವ ಸಂಪ್ರದಾಯಕ್ಕೆ ನಾಂದಿ ಹಾಡಿಯಾಗಿದೆ. ಹೀಗೆ ಕಷ್ಟವನ್ನು ನಿವಾರಿಸಲು ಹೋಗಿ ಅನುಭವವನ್ನೆ ನಿರಾಕರಿಸುತ್ತಿದ್ದೇವೆ. ಪ್ರಸಿದ್ಧ ಮನಃಶಾಸ್ತ್ರಜ್ಞ ವಿಕ್ಟರ್ ಇ. ಫ್ರಾಂಕ್ಲ್ ಹೇಳುವಂತೆ "ದುಃಖಕ್ಕೂ ಅರ್ಥವದೆ ಎಂದು ತಿಳಿದಾಗ ದುಃಖವು ದುಃಖವಾಗಿ ಉಳಿಯುವುದಿಲ್ಲ. ಆದರೆ ಅನುಭವಗಳಿಂದ ಹೇಗೆ ಪಾಠ ಕಲಿಯಬೇಕೆಂಬುದು ನಮಗೆ ತಿಳಿದಿರಬೇಕು."

ಜೀವನದಲ್ಲಿ ನೋವಿನ ಅನುಭವವಿಲ್ಲದಿದ್ದರೆ ನಲಿವಿನ ಅನುಭವವಾದರು ಎಲ್ಲಿಂದ ಬರಬೇಕು! ಅನುಭವವಿಲ್ಲದ ಬದುಕು ಯಾಂತ್ರಿಕ ಬದುಕು.

ಹಿಂದೆ ಗುರುಕುಲದಲ್ಲಿ ಶಿಕ್ಷಣವನ್ನು ಅನುಭವದ ಮುಖಾಂತರ ಕಲಿಸುತ್ತಿದ್ದರು. ಪ್ರತಿಯೊಬ್ಬ ಶಿಷ್ಯರು ಭಿಕ್ಷೆ ಬೇಡಿ ಆಶ್ರಮಕ್ಕೆ ಆಹಾರ ಸಾಮಾಗ್ರಿ ತರಬೇಕು. ತೋಟ, ಗದ್ದೆಯಲ್ಲಿ ಶಿಷ್ಯರಾಗಿದ್ದಾಗಲೆ ಮೈ ಮುರಿದು ಕೆಲಸ ಮಾಡಬೇಕು. ಹಸುವಿನ ಲಾಲನೆ–ಪಾಲನೆ ಮಾಡಬೇಕು. ಗುರುಗಳು ಶಿಷ್ಯನಿಗೆ ಪಾಠ ಹೇಳಿಕೊಡುವ ಮೊದಲು ಅವನು ಸಾಕಷ್ಟು ಆಶ್ರಮದ ಸೇವಾ ಕೆಲಸಗಳಲ್ಲಿ ತೊಡಗಿಸಿ, ತದನಂತರ ವಿದ್ಯೆಯನ್ನು ಧಾರೆ ಎಳೆಯುತ್ತಿದ್ದರು. ಶಿಷ್ಯನೇನಾದರೂ ತಪ್ಪಾಗಿ ನಡೆದುಕೊಂಡರೆ ಶಿಕ್ಷೆಯನ್ನು ಕೊಡಲು ಹಿಂದೆ–ಮುಂದೆ ನೋಡುತ್ತಿರಲಿಲ್ಲ.

ಹಿಂದೆ ಒಬ್ಬ ರಾಜನಿದ್ದ. ಅವನಿಗೆ ಒಬ್ಬನೇ ಒಬ್ಬ ಮಗನಿದ್ದ. ಎಂಟು ವರ್ಷಗಳಾಗುತ್ತಿದ್ದಂತೆ ರಾಜನು ಅವನನ್ನು ಅಧ್ಯಯನಕ್ಕಾಗಿ ಗುರುಕುಲಕ್ಕೆ ಕಳುಹಿಸಿದ.

ಗುರುಕುಲದಲ್ಲಿ ರಾಜಕುಮಾರನ ಅಧ್ಯಯನ ಮುಗಿಯಿತು. ರಾಜನು ಮಗನನ್ನು ಕರೆದುಕೊಂಡು ಹೋಗಲು ಗುರುಕುಲಕ್ಕೆ ಬಂದ.

ಅಲ್ಲಿ ರಾಜಕುಮಾರನನ್ನು ಬೀಳ್ಕೊಡುವ ಸಮಾರಂಭ ಜರಗಿತು. ಹೊರಡುವ ಮೊದಲು ರಾಜಕುಮಾರನು ಗುರುಗಳಿಗೆ ನಮಸ್ಕಾರ ಮಾಡಿದನು. ಗುರುಗಳು ರಾಜಕುಮಾರನನ್ನು ಕುರಿತು – "ನನ್ನ ಕೋಲನ್ನು ತೆಗೆದುಕೊಂಡು ಬಾ" ಎಂದರು. ರಾಜಕುಮಾರ ಒಳಗೆ ಹೋಗಿ ಕೋಲನ್ನು ತಂದು ಗುರುಗಳ ಎದುರಿಗಿಟ್ಟ, ಗುರುಗಳು ಕೂಡಲೇ ಅದನ್ನೆತ್ತಿ ರಾಜಕುಮಾರನಿಗೆ ಎರಡು ಸಾರಿ ಹೊಡೆದರು. ಹೊಡೆತ ಎಷ್ಟು ಬಲವಾಗಿತ್ತೆಂದರೆ ಈ ಹೊಡೆತಗಳಿಂದ ರಾಜಕುಮಾರನ ಬೆನ್ನ ಮೇಲೆ ಕೋಲಿನ ಗುರುತು ಚೆನ್ನಾಗಿ ಕಾಣಿಸುತ್ತಿತ್ತು. ಅನಂತರ ಗುರುಗಳು ಸಮಾಧಾನದಿಂದಲೇ, "ವತ್ಸ, ನಿನಗೆ ಮಂಗಳವಾಗಲಿ, ಈಗ ನೀನು ತಂದೆಯೊಡನೆ ಹೋಗಬಹುದು" ಎಂದರು.

ವಿನಯವಂತನಾದ ರಾಜಕುಮಾರ ಏನನ್ನು ಮಾತನಾಡದೆ ತಂದೆಯ ಸಮೀಪಕ್ಕೆ ಬಂದ. ರಾಜನು ಆಶ್ಚರ್ಯದಿಂದ "ಗುರುಗಳೇ, ಗುರುಕುಲದಿಂದ ಬೀಳ್ಕೊಡುವಾಗ ಹರಸಬೇಕಾದುದು ರೂಢಿ. ನೀವಾದರೋ ಯುವರಾಜನನ್ನು ಚೆನ್ನಾಗಿ ದಂಡಿಸಿದರಿ. ಇದೇತಕ್ಕೆ? ನನ್ನ ಮಗ ಏನು ತಪ್ಪು ಮಾಡಿದ? ನೀವು ಅವನನ್ನು ಏಕೆ ಹೊಡೆದಿರಿ?" ಎಂದು ಗುರುಗಳನ್ನು ಕೇಳಿದ.

ಆಗ ಗುರುಗಳು ಸಮಾಧಾನವಾಗಿಯೇ – "ಮಹಾರಾಜ! ನಿನ್ನ ಮಗನಿಗೆ ಎಲ್ಲಾ ವಿಧದ ಶಿಕ್ಷಣ ನೀಡಿದೆನಾದರೂ ನೋವೊಂದನ್ನು ಅರ್ಥ ಮಾಡಿಸಿರಲಿಲ್ಲ ಏಕೆಂದರೆ ಅವನು ಎಂದೂ ಇಲ್ಲಿ ಶಿಕ್ಷೆಗೆ ಗುರಿಯಾಗಿರಲಿಲ್ಲ. ಅತ್ಯಂತ ವಿನಯಶೀಲನೂ ಗುಣಸಂಪನ್ನನೂ ಆದ ಆತ ಯಾವಗಲೂ ತನ್ನ ಶಿಕ್ಷೆಗೆ ಅವಕಾಶವನ್ನೇ ಕೊಟ್ಟಿರಲಿಲ್ಲ. ಇನ್ನು ಮುಂದೆ ಅವನು ರಾಜನಾಗುತ್ತಾನೆ. ಯಾರು ಇನ್ನೊಬ್ಬರನ್ನು ಶಿಕ್ಷಿಸುತ್ತಾರೋ ಅವರು ಶಿಕ್ಷೆಯ ನೋವನ್ನು ಸ್ವತಃ ಅನುಭವಿಸಿರಬೇಕು. ಆಗಲೇ ಬೇರೆಯವರನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಆದುದರಿಂದಲೇ ಮನಸ್ಸೊಪ್ಪದಿದ್ದರೂ ನಾನು ಅವನಿಗೆ ನೋವನ್ನು ಉಣಿಸಬೇಕಾಯಿತು. ಮುಂದಿನ ಜೀವನದ ಒಳಿತಿನ ದೃಷ್ಟಿಯಿಂದ ಇದು ಆಶೀರ್ವಾದವೇ ಸರಿ" ಎಂದರು. ಗುರುಗಳ ಮಾತುಗಳನ್ನು ಕೇಳಿದ ಮಹಾರಾಜನು ಸಂತೋಷಗೊಂಡವನಾಗಿ ಮಗನನ್ನು ಕರೆದುಕೊಂಡು ಅರಮನೆಗೆ ಹಿಂದಿರುಗಿದ. ಆದರೆ ಆಧುನಿಕ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ತಪ್ಪು ಮಾಡಿದರೆ ಶಿಕ್ಷೆಕೊಡುವುದೇ ಅಪರಾಧ ಎಂಬುದಾಗಿ ಸರ್ಕಾರಗಳು ಇಂದು ಫರ್ಮಾನು ಹೊರಡಿಸಿವೆ. ಹಲವು ಬಾರಿ ಶಿಕ್ಷೆ ಕೂಡ ಶಿಕ್ಷಣದ ಒಂದು ಭಾಗ ಎಂಬುದನ್ನು ನಾವು ಮರೆತಿದ್ದೇವೆ.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ಪದವಿ ಪಡೆದಾತ ಹಳ್ಳಿಯ ರೈತನೊಬ್ಬನ ಮನೆಗೆ ಬಂದ. ರೈತ ಬೆಳೆದ ಗಜಲಿಂಬೆಯ ಗಾತ್ರವನ್ನು ಕಂಡು ಅದು ಸಣ್ಣದಾಗಿರಲು

ಕಾರಣ ಏನು, ಅದರ ಗಾತ್ರ ದೊಡ್ಡದು ಮಾಡಲು ಅದಕ್ಕೆ ಏನೇನು ಮಾಡಬೇಕು, ಯಾವ್ಯಾವ ಪೋಷಕಾಂಶ ಹಾಕಬೇಕು – ಎಲ್ಲವನ್ನೂ ಸವಿವರವಾಗಿ ತಿಳಿಸಿದ. ಪದವಿಧರನ ಭಾಷಣವನ್ನೆಲ್ಲಾ ಕೇಳಿದ ಮೇಲೆ ಆ ರೈತ ಹೇಳಿದ: "ನೀವಿ ಹೇಳುವುದೆಲ್ಲವೂ ಸರಿ. ಆದರೆ ನೀವು ಯಾವುದನ್ನು ಗಜಲಿಂಬೆ ಎಂದು ತಿಳಿದಿದ್ದೀರಿ ಅದು ಗಜಲಿಂಬೆ ಅಲ್ಲ; ಬರಿ ಲಿಂಬೆ."

ಹಳ್ಳಿಯಲ್ಲೊಬ್ಬ ವೈದ್ಯರಿದ್ದರು. ಅವರು ವೈದ್ಯಶಿಕ್ಷಣವನ್ನು ಎಲ್ಲಿ ಪಡೆದಿದ್ದರೋ ಯಾರಿಗೂ ಗೊತ್ತಿಲ್ಲ. ಅವರು ಶಿಕ್ಷಣ ಪಡೆದಿದ್ದರೋ ಅಥವಾ ಅಲ್ಲಿ–ಇಲ್ಲಿ ನೋಡಿ ಕಲಿತಿದ್ದರೋ ಅದು ಗೊತ್ತಿಲ್ಲ. ಆದರೆ ಆತ ಅನುಭವದಿಂದಲೇ ಆ ಊರಿನಲ್ಲಿ ಪ್ರಸಿದ್ಧ ವೈದ್ಯನಾಗಿದ್ದ. ಆತನ ಮಗನು ಇಂಗ್ಲೆಂಡಿಗೆ ಹೋಗಿ ಉನ್ನತ ವೈದ್ಯಕೀಯ ಪದವಿಗಳಿಸಿ ತಂದೆಯೊಂದಿಗೆ ವೃತ್ತಿಯಲ್ಲಿ ತೊಡಗಿದ್ದ.

ಒಂದುದಿನ ಒಬ್ಬ ರೈತ ವೈದ್ಯರ ಮನೆಗೆ ಓಡಿ ಬಂದ. ಅವನ ಮಗುವಿಗೆ ಜ್ವರ ವಿಪರೀತವಾಗಿದೆ. ಮೊನ್ನೆಯವರೆಗೆ ಕಡಿಮೆಯಾದ ಜ್ವರ ಮತ್ತೆ ಹೆಚ್ಚಾಗಿದೆ. ವೈದ್ಯರು ರೋಗಿಯನ್ನು ನೋಡುವುದಕ್ಕೆ ಹೊರಟರು. ಮಗನನ್ನು ಜೊತೆಗೆ ಬಾ ಎಂದು ಕರೆದುಕೊಂಡು ನಡೆದರು. ರೈತನ ಮನೆಯಲ್ಲಿ ಮಗುವಿನ ಹಾಸಿಗೆಯ ಮೇಲೆ ಕುಳಿತು, ಅವರ ನಾಡಿ ಹಿಡಿದುಕೊಂಡು ಕಣ್ಣು ಮುಚ್ಚುದರು. ಎರೆಡು ನಿಮಿಷದ ಮೇಲೆ ಕಣ್ಣು ತೆಗೆದು ಕೋಪದಿಂದ, "ಏನಯ್ಯಾ, ಮಗುವಿಗೆ ಅಪಥ್ಯ ಮಾಡಿಸಿದ್ದೀಯಾ?" ಎಂದರು. ರೈತ ಗಾಬರಿಯಿಂದ "ಇಲ್ಲ ಸ್ವಾಮಿ, ತಾವು ಹೇಳಿದಂತೆಯೇ ಔಷಧಿ ಕೊಟ್ಟಿದ್ದೇನೆ" ಎಂದ. "ಔಷಧಿ ಕೊಟ್ಟಿದ್ದೀಯಾ. ಆದರೆ ಬಾಳೆ ಹಣ್ಣು ತಿನ್ನಿಸಿದ್ದೀಯ, ಹೌದೊ ಅಲ್ಲವೋ; ನಿಜ ಹೇಳು. ನನಗೆ ನಾಡಿಯಲ್ಲಿ ಬಾಳೆಹಣ್ಣು ತಿಂದದ್ದು ಗೊತ್ತಾಗುತ್ತಿದೆ" ಎಂದರು. ಆಗ ಆತ "ಹೌದು ಸ್ವಾಮೀ, ಮಗ ಬಾಳೆಹಣ್ಣು ಬೇಕು ಎಂದ ಬಹಳ ಅತ್ತ. ನೋಡಲಾರದೇ ಎರಡು ತಿನ್ನಿಸಿದ್ದೆ" ಎಂದ.

ಇಂಗ್ಲೆಂಡಿನಲ್ಲಿ ಪದವಿ ಪಡೆದ ತರುಣ ವೈದ್ಯರ ಮಗನಿಗೆ ಆಶ್ಚರ್ಯ. ನಾಡಿಯಿಂದ ಬಾಳೆಹಣ್ಣು ಪತ್ತೆ ಹಚ್ಚುವುದನ್ನು ಇಂಗ್ಲೆಡಿನಲ್ಲು ಹೇಲಿಕೊಟ್ಟಿರಲಿಲ್ಲ. ಮನೆ ಬಂದಮೇಲೆ ತಂದೆಯನ್ನು ಕೇಳಿದ. ವೃದ್ಧ ತಂದೆ, "ದಡ್ಡ ಬಾಳೆಹಣ್ಣು ತಿಂದದ್ದು ನಾಡಿಯಲ್ಲಿ ಗೊತ್ತಾಗುತ್ತದೇನೊ? ಅದೆಲ್ಲಾ ಸಾಮಾನ್ಯ ಜ್ಞಾನ. ಈ ರೈತಾಪಿ ಜನ ಮನೆಯನ್ನು ಸ್ವಚ್ಛವಾಗಿಟ್ಟುಕೊಂಡಿರುವುದಿಲ್ಲ. ಮಗುವಿಗೆ ತಿನ್ನಿಸಿದ್ದರ ಅವಶೇಷವನ್ನು ಅಲ್ಲೇ ಹಾಸಿಗೆಯ ಕೆಳಗೆ ಹಾಕಿರುತ್ತಾರೆ. ಅದನ್ನು ನೋಡಿ ಹಾಗೆ ಹೇಳಿದೆ" ಎಂದರು. ಮಹನಿಗೆ ಜ್ಞಾನೋದಯವಾಯಿತು.

ಎರಡು ದಿನದ ಮೇಲೆ ಇದೇ ತರಹದ ಮತ್ತೊಂದು ತಕರಾರು ಬಂತು. ತಂದೆ ಊರಲ್ಲಿರಲಿಲ್ಲ, ಮಗನೇ ಹೋದ. ರೋಗಿಯ ನಾಡಿ ಹಿಡಿದು ಅತ್ತಿತ್ತಾ ನೋಡಿದ. ನಂತರ ರೇಗಿದ, "ಏನ್ರಿ ಇದು, ಅಪಥ್ಯ ಮಾಡಿಸಿದ್ದೀರಿ. ರೋಗಿಗೆ ಚರ್ಮದ ತುಂಡು ತನ್ನಿಸಿದ್ದೀರಿ; ನಾಡಿಯಲ್ಲಿ ನನಗೆ ಗೊತ್ತಾಗುತ್ತದೆ.!" ಮನೆಯವರಿಗೆ

ಹುಚ್ಚು ಹಿಡಿದಂತಾಯಿತು. ನಂತರ ಬಂದು ಹಿರಿಯ ವೈದ್ಯರಿಗೆ ದೂರಿದರು. ಅವರಿಗೆ ವಿಷಯ ಗೊತ್ತಾಗಿ ಮಗನಿಗೆ ಬೈದರು. "ದಡ್ಡ, ನಾನು ಬಾಳೆಹಣ್ಣು ಹೇಳಿದೆ ಎಂದು ನೀನಲ್ಲಿ ಚರ್ಮ ಹೇಳಿದೆಯಾ? ಅದು ಚಮ್ಮಾರನ ಮನೆ, ಚರ್ಮದ ತುಂಡು ಅಲ್ಲಿ ಇಲ್ಲಿ ಬಿದ್ದಿರುತ್ತವೆ. ಅದನ್ನು ತಿನ್ನುವುದಕ್ಕೆ ಆಗುತ್ತದೆಯೇ? ಅದು ಸಾಮಾನ್ಯಜ್ಞಾನ ಅಲ್ಲವೇ?"

ಕಥೆ ಅತಿಶಯೋಕ್ತಿ ಇರಬಹುದು. ಆದರೆ ಬಹುಜನರಿಗೆ ಸಾಮಾನ್ಯಜ್ಞಾನ ಸಮಾನ್ಯವಾಗಿ ಇರುವುದಿಲ್ಲ. ಅದು ಅನುಭವದಿಂದ ಬರುವಂಥದ್ದು.

**ಅನುಭವದ ಪಾಲೊಳು ವಿಚಾರ ಮಂಥನವಾಗೆ**
**ಜನಿಯಿಕುಂ ಜ್ಞಾನನವನೀತವದೆ ಸುಖದಂ**
**ಗಿಣಿಯೋದು ಪುಸ್ತಕಜ್ಞಾನ; ನಿನ್ನನುಭವವೆ**
**ನಿನಯ ಧರುಮದ ದೀಪ – ಮಂಕುತಿಮ್ಮ**

ಅನುಭವವೆಂಬ ಹಾಲನ್ನು ವಿಚಾರವೆಂಬ ಮಂತಿನಿಂದ ಕಡೆದಾಗ ಜ್ಞಾನವೆಂಬ ಬೆಣ್ಣೆ ಹುಟ್ಟುತ್ತದೆ. ಅದು ಸುಖವನ್ನು ಕೊಡತಕ್ಕದ್ದು. ಪುಸ್ತಕದಿಂದ ದೊರೆತ ಜ್ಞಾನ ಕೇವಲ ಗಿಳಿಪಾಠ. ನ್ನಿನ್ನನುಭವವೆ ನಿನಗೆ ಧರ್ಮದ ದೀಪ.

ಯಾರು ಅನುಭವದ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ರಚಿಸುತ್ತಾರೋ ಅವರದು ಜನರ ಹೃದಯವನ್ನು ತಟ್ಟುತ್ತದೆ. ಅದು ನಿತ್ಯನೂತನವಾಗಿರುತ್ತದೆ. ಅದು ಎಲ್ಲ ಓದುಗರಿಗೂ ಚಿರಂತನವಾದ ಸ್ಫೂರ್ತಿ ಕೊಡುತ್ತದೆ. ಬಡತನದಲ್ಲಿ ಬೆಂದ ಬೇಂದ್ರಯವರ ಕವನಕ್ಕೆ ಬೆಲೆ ಕಟ್ಟಲಾದೀತೇ? ಯಾವುದೇ ವಿಚಾರದ ಬಗ್ಗೆ ಅನುಭವವನ್ನು ಪಡೆದ ಬಳಿಕವೇ ಕಾದಂಬರಿಯನ್ನು ಬರೆಯುವ ಅಭ್ಯಾಸ ಇಟ್ಟುಕೊಂಡ ಎಸ್.ಎಲ್. ಭೈರಪನವರ ಕೃತಿಯನ್ನು ಬೇರೆ ಅನುಭವರಹಿತ ಕೃತಿಗೆ ಹೋಲಿಸಲಾದೀತೇ? ಡೋಸ್ಟೋವೆಸ್ಕಿ ಆಗಲಿ, ಟಾಲ್‌ಸ್ಟಾಯ್ ಆಗಲಿ, ಚಿತ್ರಹಿಂಸೆಯ ಬದುಕನ್ನು ಅನುಭವಿಸದೇ ಇರುತ್ತಿದ್ದಲ್ಲಿ ಅಂಥ ಅಮರ ಕಾದಂಬರಿಗಳನ್ನು ಬರೆಯಲು ಸಮರ್ಥರಾಗುತ್ತಿರಲ್ಲಿಲ್ಲವೋ ಏನೋ! ಕುವೆಂಪು, ಶಿವರಾಮ ಕಾರಂತ, ಮಾಸ್ತಿ, ಮೊದಲಾದವರ ಕೃತಿಗಳಲ್ಲಿ ಅನುಭವ ಮಡುಗಟ್ಟಿದ್ದನ್ನು ನಾವು ಕಾಣಬಹುದು. "ಅನುಭವಜನ್ಯವಲ್ಲದು ಸಾಹಿತ್ಯವೇ ಅಲ್ಲ" ಎಂಬುದಾಗಿ ಶಿವರಾಮ ಕಾರಂತರು ಹೇಳಿದ್ದಾರೆ. ಪ್ರಸಿದ್ಧ ಸಾಹಿತ್ಯಗಳೆಲ್ಲರೂ ಅನುಭವ ಪಡೆದ ಬಳಿಕವೇ ಸಾಹಿತ್ಯವನ್ನು ರಚಿಸುತ್ತಿದ್ದರು.

ಜಾನ್ ಗಾಲ್ಸ್‌ವರ್ದಿ (೧೮೬೭–೧೯೩೩) ಇಂಗ್ಲೆಂಡಿನ ಪ್ರಸಿದ್ಧ ಕಾದಂಬರಿಕಾರ, ನಾಟಕ ಕರ್ತೃ, ನೊಬೆಲ್ ಪುರಸ್ಕಾರ ಪಡೆದುದು ಇವರ ಸಾಹಿತ್ಯದ ಹಿರಿಮೆಗೆ ಸಾಕ್ಷಿ. ಇವರು 'ಜಸ್ಟಿಸ್' ಎಂಬ ನಾಟಕವನ್ನು ಬರೆಯಲು ನಿರ್ಧರಿಸಿದಾಗ ಸೆರೆಮನೆಯೊಳಗಿನ ಕೈದಿಗಳ ಯಾತನೆಯ ನೈಜ ಅನುಭವ ಅಗತ್ಯವೆನಿಸಿತು. ತಾನು ಸೆರೆಯಾಳುವಾದರೆ ಮಾತ್ರ ಇದು ಸಾಧ್ಯವೆಂದರಿತ ಅವರು ವಿನಾಕಾರಣ ಅಂಗಡಿಯೊಂದರ ಗಾಜಿನ ಕಿಟಕಿಗೆ ಕಲ್ಲು ಹೊಡೆದರು.

ಪೋಲಿಸರು ಗಾಲ್ಸ್‌ವರ್ದಿಯನ್ನು ಬಂಧಿಸಿ ನ್ಯಾಯಲಯಕ್ಕೆ ಒಯ್ದರು. ವಿಚಾರಣೆ ನಡೆದು ತೀರ್ಪು ಹೊರಬಿದ್ದಾಗ ಅವರಿಗೆ ಆರು ತಿಂಗಳ ಸಜೆ ವಿಧಿಸಲಾಯಿತು. ಇದನ್ನು ಸ್ವಾಗತಿಸಿದ ಜಾನ್ ಸಮಾನ್ಯ ಕೈದಿಯಾಗಿ ಜೈಲಿನಲ್ಲಿದ್ದು ಅಲ್ಲಿನ ನೇರ ಅನುಭವ ಗಳಿಸಿದರು. ಬಿಡುಗಡೆಯಾದ ಮೇಲೆ ಅವರು ಬರೆದ ನಾಟಕದಲ್ಲಿ ಕಾರಾಗೃಹದ ದೃಶ್ಯಗಳು ಅದ್ಭುತವಾಗಿ ಮೂಡಿ ಬಂದವು. ಪೋಲಿಸರು, ಕೈದಿಗಳು ಮತ್ತು ಸಾರ್ವಜನಿಕರು ಅಭಿನಂದನೆಯ ಸುರಿಮಳೆಗರೆದರು.

ಇಂದು ನಮ್ಮ ಸಮಾಜದಲ್ಲಿ ರೈತರ ಆತ್ಮಹತ್ಯೆ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದೆ. ರೈತರ ಸಮಸ್ಯೆಗಳಿಗೆ ರಾಜಕಾರಣಿಗಳೇನೋ ರಾಜಧಾನಿಯಲ್ಲಿ ಹವಾನಿಯಂತ್ರಿತ ಕೊಠಡಿಯಲ್ಲಿ ಕೂತು ಪರಿಹಾರ ಸೂಚಿಸುತ್ತಾರೆ. ಆದರೆ ಇಂತಹ ಬಹುತೇಕ ಪರಿಹಾರಗಳು ನಿಷ್ಪ್ರಯೋಜಕ. ಯಾಕೆಂದರೆ ರಾಜಕಾರಣಿಗಳಿಗೆ ರೈತರ ಬವಣೆಯಾಗಲಿ, ಬಡತನದ ಬೇಗೆಯಾಗಲಿ ಗೊತ್ತೇ ಇರುವುದಿಲ್ಲ. ಈ ದೇಶದ ಬಡವರ ಸಮಸ್ಯೆ ನಿವಾರಣೆ ಆಗಬೇಕೆಂಬ ಪ್ರಾಮಾಣಿಕ ಮನಸ್ಸು ಅವರಲ್ಲಿಲ್ಲ. ರಾಜಕಾರಣಿಗಳಿಗೆ ಅವರ ಮತ ಮುಖ್ಯವೇ ವಿನಾ ಅವರ ಸಮಸ್ಯೆ ನಿವಾರಣೆ ಮುಖ್ಯವಲ್ಲ. ಆಡಳಿತ ನಡೆಸುವ ಅಧಿಕಾರಿಗಲೂ ಸ್ವಾರ್ಥ ರಾಜಕಾರಣಿಗಳ ತಾಳಕ್ಕೆ ತಕ್ಕಂತೆ ಕುಣಿಯಿತ್ತಿರುವುದು ನಿಜಕ್ಕೂ ಈ ದೇಶದ ದುರಂತರೇ ಸರಿ. ಈ ಬಗ್ಗೆ ಹಲವಾರು ವರ್ಷಗಳ ಹಿಂದೆ ಗಾಂಧಿಯವರು ಹೇಳಿದ ಮಾತು ನೆನಪಾಗುತ್ತದೆ:

"ಆಡಳಿದ ಸೇವಾ ವ್ಯವಸ್ಥೆಗೆ ಸೇರಿದ ಜನರಿಗೆ ಭಾರತದ ಜೀವನದ ದರ್ಶನ ಆಗಬೇಕಾದರೆ ಅವರನ್ನು ಭಾರತದ ಗ್ರಾಮಾಂತರ ಪ್ರದೇಶದಲ್ಲಿ ಆರು ತಿಂಗಳ ಕಾಲ ಇಡಬೇಕು. ಅವರನ್ನು ಎಂತಹ ಹಳ್ಳಿಗೆ ಕಳಿಸಬೇಕೆಂದರೆ, ಆ ಹಳ್ಳಿಯಲ್ಲಿ ಜನ ಮತ್ತು ದನದ ಜೊತೆ ಹೊರಳಾಡಬೇಕು. ಅಧಿಕಾರಿ ಜನರು ಅವರು ಉಟ ಮಾಡುವ ಅಂಬಲಿ ಮುದ್ದೆ ರೊಟ್ಟಿ ತಿನ್ನಬೇಕು. ಅವರು ಮಲಗುವ ಕಂಬಳಿ ಕೌದಿಗಳಲ್ಲಿ ಮಲಗಬೇಕು. ಬೆಳಗ್ಗೆ ಎದ್ದು ಬಾರು ಕೋಲನ್ನು ಹೆಗಲಿಗೆ ಹಾಕಿಕೊಂಡು ಎತ್ತುಗಳನ್ನು ಹೊಲಕ್ಕೆ ಹೊಡೆದುಕೊಂಡು ಹೋಗಿ ಅಲ್ಲಿ ಬಿಸಿಲಲ್ಲಿ ಭೂಮಿಯನ್ನು ಉಳುಮೆ ಮಾಡಬೇಕು. ಸಂಜೆಯ ಹೊತ್ತು ರೈತರು ಮನೆಗೆ ಹಿಂದಿರುವಾಗ ಮನೆಗೆ ಬರಬೇಕು. ಅಂಥ ಹಳ್ಳಿಯಲ್ಲಿ ಆರು ತಿಂಗಳ ಕಾಲ ಇದ್ದರೆ, ಹಳ್ಳಿ ಎಂದರೆ ಏನು, ಜನ ಎಂದರೆ ಏನು, ಬಡತನ ಅಂದರೆ ಏನು ಎನ್ನುವುದು ಅವರಿಗೆ ತಿಳಿಯುತ್ತದೆ."

ಜೀವನದಲ್ಲಿ ನಾವು ಸೋತಾಗ, ಕಷ್ಟವನ್ನು ಅನುಭವಿಸಿದಾಗ ತತ್ವಶಾಸ್ತ್ರಗಳಲ್ಲಿ ಇದಕ್ಕೆ ಪರಿಹಾರವನ್ನು ಹುಡುಕುತ್ತೇವೆ. ಜೀವಂತಿಕೆಯ ಜೀವನದ ಅನುಭವದಿಂದ ನಮ್ಮ ಕಷ್ಟಗಳಿಗೆ, ಸಮಸ್ಯೆಗಳಿಗೆ ಸಮಾಧಾನಕರ ಉತ್ತರಗಳು ಸಿಗಬಹುದೇ ವಿನಾ ತತ್ವಶಾಸ್ತ್ರದ ಮೂಲಕ ಅಲ್ಲ. ಪುಸ್ತಕದ ಮೂಲಕ ಯಾವುದೊಂದು ಉತ್ತರವೂ ಸಿಗುವುದಿಲ್ಲ. ಮಗುವಿಗೆ ಬೆಂಕಿಯ ಹತ್ತಿರ ಹೋಗಬೇಡ, ಅದು ಮೈಯನ್ನು ಸುಡುತ್ತದೆ ಎಂಬುದಾಗಿ ಸಾವಿರ ಸಲ ಹೇಳಿದರೂ ಅದಕ್ಕೆ ಅದು ಗೊತ್ತಾಗುವುದಿಲ್ಲ. ಯಾಕೆಂದರೆ

ಬೆಂಕಿ ಮುಟ್ಟಿದರೆ ದೇಹ ಸುಡುತ್ತದೆ ಎಂಬುದು ಒಂದು ಸತ್ಯ. ಆದರೆ ಸತ್ಯದ ಸಾಕ್ಷಾತ್ಕಾರಕ್ಕೆ ಪ್ರತ್ಯಕ್ಷ ಅನುಭವವೇ ಆಗಬೇಕು. ಮಗು ಆಕಸ್ಮಿಕವಾಗಿ ಯಾವತ್ತಾದರೂ ಬೆಂಕಿಯನ್ನು ಮುಟ್ಟಿ ಕೈ ಸುಟ್ಟಿಕೊಂಡರೆ, ತದನಂತರ ಆ ಮಗು ಬೆಂಕಿಯ ಹತ್ತಿರ ಹೋಗುವುದಿಲ್ಲ. ಯಾಕೆಂದರೆ ಬೆಂಕಿ ಮುಟ್ಟಿದರೆ ಕೈ ಸುಡುತ್ತದೆ ಎನ್ನುವ ಉಪದೇಶಕ್ಕಿಂತ ಅನುಭವ ಹೆಚ್ಚಿನ ಪಾಠ ಕಲಿಸುತ್ತದೆ. ಆದ್ದರಿಂದ ಅನುಭವದ ಅಗ್ನಿಪರೀಕ್ಷೆಗೆ ಒಳಗಾದ ಯಾವ ಸಿದ್ಧಾಂತವೂ ಸಿದ್ಧಾಂತವಲ್ಲ, ಆದರ್ಶ ಆದರ್ಶವಲ್ಲ.

ಗೌತಮ ಬುದ್ಧ ಒಮ್ಮೆ ಒಂದು ಹಳ್ಳಿಯಲ್ಲಿ ತಂಗಿದ್ದ. ಊರ ಮಂದಿ ಆ ಊರಿನ ಒಬ್ಬ ಕುರುಡನನ್ನು ಅವನಲ್ಲಿಗೆ ಕರೆತಂದರು. ಅವನು ಹುಟ್ಟು ಕುರುಡ. ಎಂದೂ ಬೆಳಕನ್ನು ಕಂಡವನೇ ಅಲ್ಲ. ಆದುದರಿಂದ ಬೆಳಕೆಂದರೇನು ಎಂಬುದನ್ನೇ ತಿಳಿದಿರಲಿಲ್ಲ. ಬೆಳಕು ಎಂಬುದು ಇಲ್ಲವೇ ಇಲ್ಲ. ಇದೆಲ್ಲ ಊರ ಮಂದಿ ತನ್ನನ್ನು ಗೊಂದಲಕ್ಕೀಡು ಮಾಡಲೆಂದೇ ಹೇಳುವ ಕಟ್ಟು ಕತೆ ಎಂದು ಸಾಧಿಸುತ್ತಿದ್ದ. ನಿಮ್ಮ ಹೇಳಿಕೆಯಂತೆ ಬೆಳಕೆಂಬುದೊಂದು ಇದ್ದರೆ ಅದರ ಪರಿಮಳವನ್ನು ನಾನು ಮೂಸಲಾರೆನೇಕೆ? ನನ್ನ ಸ್ಪರ್ಶಕ್ಕೆ ಸಿಕ್ಕುವುದಿಲ್ಲವೇಕದು? ಅದರ ಮರ್ಮರ ಕೇಳಿಸುವುದಿಲ್ಲವೇಕೆ? ಇನ್ನು ನೋಡುವುದೆಂದರೇನು; ನಾನೇಕೆ ನೋಡಲಾರೆ? ನೀವೆಲ್ಲ ನೋಡ್ತೀನಿ, ನೋಡ್ತೀನಿ ಅನ್ನುವುದು ಒಂದು ಭ್ರಮೆಯಾಗಿರದೇಕೆ? ಕಡೆಯದಾಗಿ ನನ್ನ ಅಭಿಪ್ರಾಯದಂತೆ ನಾನು ನೋಡಲಾಗದ್ದನ್ನು ನೀವ್ಯಾರೂ ನೋಡಲಾರಿರಿ. ಯಾಕೆಂದರೆ ನೋಡುವಿಕೆ ಅನ್ನುವದೇ ಇಲ್ಲ. ಹಾಗೆ ಬೆಳಕು ಎಂಬುದೂ ಇಲ್ಲ.

ಎಲ್ಲವನ್ನೂ ಕೇಳಿದ ಬುದ್ಧದೇವನೆಂದ: "ಎಂದೂ ನೋಡುವಿಕೆ ಎಂಬುವುದರ ಅನುಭವವಿಲ್ಲದವನಿಗೆ ನೋಟವನ್ನು ವಿವರಿಸುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಅದು ಅಸಾಧ್ಯ ಕೂಡ. ಇವನಿಗೆ ತಜ್ಞವೈದ್ಯರ ಅಗತ್ಯವಿದೆ. ವಾದ, ಪ್ರತಿವಾದಗಳದ್ದಲ್ಲ."

ಮುಂದೆ ಒಂದು ದಿನ ಅವನಿಗೆ ದೃಷ್ಟಿ ಬಂತು. ಅವನು ಕಣ್ಣು ತೆರೆದು ಪ್ರಪಂಚ ನೋಡಿದ. ಬೆಳಕು ಕಂಡ. ಬುದ್ಧನನ್ನೂ ಕಂಡ. ಬುದ್ಧನೆಂದ "ಹಾ! ಬೆಳಕನ್ನು ಸ್ಪರ್ಶಿಸಬಹುದೇ? ಆಘ್ರಾಣಿಸಬಹುದೇ? ರುಚಿ ನೋಡಬಹುದೇ?"

ಕಣ್ಣು ಬಂದ ಕುರುಡ ದೀನನಾಗಿ ಹೀಗೆಂದಾ: "ಯಾವುದು ಸ್ಪರ್ಶ, ರೂಪ, ರಸ, ಗಂಧಗಳಿಗೆ ಸಿಗದೆ ಭಿನ್ನವಾಗಿ ಕೇವಲ ಅನುಭವ ವೇದ್ಯವಾಗಿದೆಯೋ ಅದರಂತೆ ಇರುವುದನ್ನು ಕಂಡೆ, ಕಣ್ಣಿಲ್ಲದಿದ್ದಾಗ ಕಾಣದನ್ನು ಕಂಡೆ."

ಲೌಕಿಕ ಜೀವನವನ್ನು ಸುಗಮವಾಗಿ ಸಾಗಿಸಬೇಕಾದರೆ ಮನುಷ್ಯನಿಗೆ ಅನುಭವ ಹೇಗೆ ಮುಖ್ಯವೋ ಹಾಗೆಯೇ ಆಧ್ಯಾತ್ಮದಲ್ಲಿ ತತ್ವಶಾಸ್ತ್ರಗಳಿಗಿಂತ ಅನುಭವ ಮುಖ್ಯ.

"ಯಾವ ಗುರುವೂ, ಶಾಸ್ತ್ರವೂ ಎಂದೂ ದೇವರನ್ನು ತೋರಿಸಲಾರವು. ತನ್ನದೇ ಪರಿಶುದ್ಧಗೊಂಡ, ಪರಿಪೂರ್ಣಗೊಂಡ ಒಳದೃಷ್ಟಿಯಿಂದ ಪ್ರತಿಯೊಬ್ಬನೂ ಭಗವಂತನನ್ನು ತನ್ನ ಅಂತರ್ಯದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಜ್ಞಾನಕ್ಕೆ ಇರುವ ಮೂಲ ಒಂದೇ ಒಂದು: ನಮ್ಮ ಪ್ರತ್ಯಕ್ಷ ಅನುಭವ. ಈ ಅನುಭವವೇ ಎಲ್ಲಾ

ಪ್ರಮಾಣಗಳಿಗೂ ಆಧಾರ – ಎಲ್ಲ ನದಿಗಳ ಮೂಲ ಸಮುದ್ರ ಹೇಗೋ ಹಾಗೆ!" ಎಂಬುದಾಗಿ ಯೋಗವಾಸಿಷ್ಠದಲ್ಲಿ ಹೇಳಿದೆ.

ಎಷ್ಟೋ ವೇಳೆ ಆಧ್ಯಾತ್ಮಿಕ ಅನುಭವವನ್ನು ವಿವರಿಸುವುದು ಕಷ್ಟ. ಯಾಕೆಂದರೆ ಆಧ್ಯಾತ್ಮದಲ್ಲಿ ಪ್ರತಿಯೊಬ್ಬರ ಅನುಭವವೂ ಒಂದೇ ಆಗಿರಬೇಕಾಗಿಲ್ಲ. ಅದು ಚಾರಣಿಗರು ಬೇರೆ ಬೇರೆ ಕಡೆಯಿಂದ ಬೆಟ್ಟವನ್ನು ಹತ್ತಿದಂತೆ. ಒಬ್ಬರ ಅನುಭವಕ್ಕೂ, ಇನ್ನೊಬ್ಬರ ಅನುಭವಕ್ಕೂ ಸಾಮ್ಯತೆಯೇ ಇರುವುದಿಲ್ಲ. ಆದ್ದರಿಂದ ಆಧ್ಯಾತ್ಮಿಕ ಅನುಭವವನ್ನು, ಸತ್ಯದ ಸಾಕ್ಷಾತ್ಕಾರವನ್ನು ಮಾತಿನಿಂದ ಇನ್ನೊಬ್ಬರಿಗೆ ತಿಳಿಸುವುದು ಅಸಾಧ್ಯ.

ಒಂದು ಗುರುಕುಲದಲ್ಲಿ ಶಿಷ್ಯ ಗುರುವನ್ನು ಕೇಳಿದ: "ಸತ್ಯವನ್ನು ಮಾತಿನ ಮೂಲಕ ಹೇಳಲು ಸಾಧ್ಯವೇ?"

"ಇಲ್ಲ" ಎಂದರು ಗುರುಗಳು.

"ಹಾಗಿದ್ದರೆ ಮೌನವಾಗಿದ್ದುಕೊಂಡು ಸತ್ಯವನ್ನು ಹೇಳಲು ಸಾಧ್ಯವೇ?"

"ಅದೂ ಸಾಧ್ಯವಿಲ್ಲ" ಎಂದರು ಗುರುಗಳು.

"ಹಾಗಾದರೆ ಸತ್ಯವನ್ನು ಹೇಳುವುದು ಹೇಗೆ?" ಶಿಷ್ಯ ಪ್ರಶ್ನಿಸಿದ.

"ಅಲ್ಲಿ ನೋಡು, ಹಕ್ಕಿಗಳು ಸುಮ್ಮನೆ ಮರದಲ್ಲಿ ಎಷ್ಟೊಂದು ಇಂಪಾಗಿ ಹಾಡುತ್ತಿವೆಯಲ್ಲ. ಹಾಗೆ ಸುಮ್ಮನೆ ಅನುಭವಿಸು" ಮಾರ್ಮಿಕವಾಗಿ ಗುರು ಉತ್ತರಿಸಿದರು. ಸತ್ಯವನ್ನು ಕಂಡನಂತರ ಹೇಳುವುದು, ಕೇಳುವುದು ಯಾವದೂ ಇರದು.

ಹೇಗೆ ಸತ್ಯವನ್ನು ವಿವರಿಸಲು ಸಾಧ್ಯವಿಲ್ಲವೋ ಅದೇ ರೀತಿ ಆಧ್ಯಾತ್ಮಲೋಕದಲ್ಲಿ ಆನಂದದ ಅನುಭವವನ್ನು ಹೇಳಲು ಆಗುವುದಿಲ್ಲ. ನಮ್ಮ ಜೀವಮಾನದಲ್ಲೂ ಕೆಲವು ಅನುಭವಗಳನ್ನು ಹುಡುಕಿ ನೋಡಿದರೆ ನಮಗೂ ಸಹ ಹೇಳಲಾಗುವುದಿಲ್ಲ. ಹುಣ್ಣಿಮೆಯ ರಾತ್ರಿಯ ಚಂದ್ರನನ್ನು ನೋಡಿ, ಅತ್ಯಂತ ಸುಂದರವಾಗಿದೆ ಎಂದು ನಾವು ಹೇಳಿದರೆ, ಇನ್ನೊಬ್ಬರು 'ಎಲ್ಲಿದೆ ಸೌಂದರ್ಯ, ಹೇಳಿ?' ಎಂದಾಗ ನಾವು ಸೌಂದರ್ಯವನ್ನು ವಿವರಿಸುವುದಾದರೂ ಹೇಗೆ? ಸೌಂದರ್ಯವನ್ನು ಮಾತಿನಿಂದ ಸಾಬೀತುಪಡಿಸುವುದದರೂ ಹೇಗೆ? ಸೌಂದರ್ಯವನ್ನು ಸಾಬೀತುಪಡಿಸಲು ಯಾವ ಉಪಾಯವೂ ಇಲ್ಲ.

ಭಕ್ತನಿಗೆ ಅನುಭವವೇನೋ ಆಗುತ್ತದೆ. ಆದರೆ ಅದರ ಬಗ್ಗೆ ಮಾತನಾಡಲು ಆಗುವುದಿಲ್ಲ, ಹೇಳಲಾಗುವುದಿಲ್ಲ, ತಾರ್ಕಿಕರಿಗೆ ಇದೊಂದು ಅರ್ಥವಾಗದ ಸಂಗತಿ, ಪಶ್ಚಿಮದ ವಿಚಾರವಂತರಾದ ಆರ್ಥರ್ ಕೋಏಸ್ಲರ್ ಹೇಳುತ್ತಿದ್ದರು: "ಅನುಭವ ಆಗಿದೆ ಎಂದರೆ ಅದನ್ನೇಕೆ ಹೇಳಲಾಗುವುದಿಲ್ಲ? ನಿಮಗೆ ತಿಳಿದಿದೆ ಎಂದರೆ ನೀವದನ್ನು ತಿಳಿಯಪಡಿಸಿ; ಅಂಥ ಅಡಚಣೆಯಾದರೂ ಏನಿದೆ? ಪೂರ್ವದ ಸಾಧು ಸಂತರಿಗೆ, ಋಷಿ ಮುನಿಗಳಿಗೆ ಮಹತ್ತರವಾದ ಏನೋ ಅನುಭವವಾಗಿದೆ ಎಂಬುದಾಗಿ ಎಲ್ಲರೂ ನಂಬುತ್ತಾರೆ. ಆದರೆ ಅನುಭವಿಗಳು ತಮ್ಮ ಅನುಭವವನ್ನು ಯಾಕೆ ಹೇಳುವುದಿಲ್ಲ? ನೀವು ಕಾಲಿಗೆ ಮುಳ್ಳು ಚುಚ್ಚಿದಾಗ ನೋವಾಗಿತ್ತದೆ ಎಂದು ಹೇಳುತ್ತೀರಿ. ಸಿಹಿ

ತಿಂದಾಗ ಸಂತೋಷವಾಗುತ್ತದೆ ಎನ್ನುತ್ತೀರಿ. ಹೀಗೆ ಲೌಕಿಕ ಅನುಭವವನ್ನು ಹೇಳುತ್ತೀರಿ. ಆದರೆ ಪರಮಾತ್ಮನ ಸಂಬಂಧ ನಿಮ್ಮ ಅನುಭವವನ್ನು ಹೇಳುವಾಗ ಮೂಗರೇಕೆ ಆಗುತ್ತೀರಿ?" ಇದು ಕೇವಲ ಆರ್ಥರ್ ಕೋಎಸ್ಲರ್ ಒಬ್ಬರ ಪ್ರಶ್ನೆಯಲ್ಲ. ವೈಚಾರಿಕರನೇಕರ ಪ್ರಶ್ನೆಯೂ ಇದೇ.

ಇಂತಹ ವಿಚಾರವಂತರ ಪ್ರಶ್ನೆಗೆ ನಾರದರು ಬಹಳ ಹಿಂದೆಯೇ ಉತ್ತರಿಸಿದ್ದಾರೆ. ಅವರು ಆಧ್ಯಾತ್ಮಿಕ ಅನುಭವವನ್ನು "ಮೂಕಾಸ್ವಾದನವತ್" ಎಂಬುದಾಗಿ ಹೇಳಿದ್ದಾರೆ. ಮೂಗನಿಗೆ ಮಾತನಾಡಲು ಆಗುವುದಿಲ್ಲ ಎಂದ ಮಾತ್ರಕ್ಕೆ ಸಿಹಿ ತಿಂದಾಗ ಆತನಿಗೆ ಸಿಹಿಯ ಅನುಭವ ಆಗಲಿಲ್ಲ ಎಂದು ಹೇಳಲಾಗುವುದಿಲ್ಲ.

ಆಧ್ಯಾತ್ಮ ಕ್ಷೇತ್ರದಲ್ಲಿ ಅನುಭವ ಪಡೆದ ಅನುಭವಿಗಳು ಮಾತನಾಡುವುದು ಕಡಿಮೆ. ರಮಣ ಮಹರ್ಷಿಗಳು ಅನುಭವಿಗಳಾದರೂ ಮಾತನಾಡಿದ್ದು ಬಹಳ ಕಡಿಮೆ. ವಿದ್ಯಾವಂತನಾದ ನರೇಂದ್ರ ಶ್ರೀರಾಮಕೃಷ್ಣ ಪರಮಹಂಸರ ಹತ್ತಿರ ಹೋಗಿ ದೇವರ ಅಸ್ತಿತ್ವದ ಬಗ್ಗೆ ಪ್ರಶ್ನಿಸಿದಾಗ ಶ್ರೀರಾಮಕೃಷ್ಣ ಪರಮಹಂಸರು ವಿವರಿಸಲು ಹೋಗಲಿಲ್ಲ. ಅವರು ನರೇಂದ್ರನ ತಲೆಯ ಮೇಲೆ ಕೈ ಇಟ್ಟು ತಮ್ಮ ಸಾಧನೆಯಿಂದ ಗಳಿಸಿದ ಅನುಭವವನ್ನು ಧಾರೆಯೆರೆದರು. ಹೀಗೆ ಸತ್ಯದ ಸಾಕ್ಷಾತ್ಕಾರ ಪಡೆದ ನರೇಂದ್ರ ಮುಂದೆ ಸ್ವಾಮಿ ವಿವೇಕಾನಂದರಾಗಿ ಜಗತ್ತಿನಲ್ಲೆ ಪ್ರಸಿದ್ಧರಾದರು. ಅನುಭವದ ಬಗ್ಗೆ ತಿಳಿದುಕೊಳ್ಳುವುದು ಬೇರೆ, ಅನುಭಾವಿಯಾಗುವುದು ಬೇರೆ; ಆನಂದದ ಬಗ್ಗೆ ತಿಳಿದುಕೊಳ್ಳುವುದು ಬೇರೆ, ಆನಂದಿತನಾಗುವುದು ಬೇರೆ. ಲೌಕಿಕ ಅನುಭವವನ್ನು ಹಂಚಿಕೊಳ್ಳಬೇಕು; ಆಧ್ಯಾತ್ಮಿಕ ಅನುಭವವನ್ನು ಕೇವಲ ಆನಂದಿಸಿ ಅದರ ಬಗ್ಗೆ ಮೌನವಾಗಿರಬೇಕು. ಲೌಕಿಕ ಹಾಗು ಪಾರಲೌಕಿಕ ಜೀವನದಲ್ಲಿ ಉನ್ನತಿ ಗಳಿಸಲು ಅನುಭವವಂತೂ ಬೇಕೇಬೇಕು.

ಹಿಂದೆ ಕೂಡು ಕುಟುಂಬದಲ್ಲಿ ಹಿರಿಯರ, ಅಜ್ಜ-ಅಜ್ಜಿಯರ ಜೀವನಾನುಭವ ಎಳೆಯ ಮಕ್ಕಳು, ಮೊಮ್ಮಕ್ಕಳಿಗೆ ದೊರೆಯುತ್ತಿತ್ತು. ಇಂದಿನ ವಿಭಕ್ತಕುಟುಂಬದಲ್ಲಿ ಇದರ ಅಭಾವ ಎದ್ದು ಕಂಡುಬರುತ್ತಿದೆ. ಹಿರಿಯರ ಅನುಭವ ನಮ್ಮ ಪಾಲಿಗೆ ದಕ್ಕದೆ ಇದ್ದರೆ ನಮ್ಮ ಬಾಳು ನಿರರ್ಥಕ. ಅದು ನರಕ ಆಗುವ ಸಾಧ್ಯತೆ ಇದೆ. ಯಾಕೆಂದರೆ ಹಿರಿಯರ ಅನುಭವ ನಮ್ಮನ್ನು ಬೀಳದಂತೆ, ಜಾರದಂತೆ ಎಚ್ಚರಿಸುತ್ತದೆ. ಜೀವನ ಎಂಬುದು ಸಮತಟ್ಟಾದ ಬಯಲಲ್ಲ. ಅದು ಏಳು-ಬೀಳಿನ ಪರ್ವತ ಪ್ರಪಾತಗಳಿಂದ, ಕಲ್ಲು ಮುಳ್ಳುಗಳಿಂದ ಕೂಡಿದ ಕಷ್ಟಕರ ದಾರಿಯ ಪಯಣ. ಇಂತಹ ಬಾಳ ಪಯಣದಲ್ಲಿ ನಾವು ಸದಾ ಜಾಗರೂಕತೆಯಿಂದ ಹೆಜ್ಜೆಯಿಡಬೇಕಾಗುತ್ತದೆ. ಇದಕ್ಕೆ ನಮ್ಮ ಹಿರಿಯರ ಅನುಭವದ ಮಾರ್ಗದರ್ಶನ ಬೇಕಾಗುತ್ತದೆ. ಅನುಭವ ತೆರೆದಿಡುವ ಅರ್ಥದ ಮುಂದೆ ಶಬ್ಧಕೋಶದ ಅರ್ಥ ಅದೆಷ್ಟು ನೀರಸ!

(ಉತ್ಥಾನ) ಸಾಧರ

# ಸರ್ವೋದಯ ಆಂದೋಲನದ ಮುನ್ನಡೆ

ಈ ಮೊದಲೆ ತಿಳಿಸಿದಂತೆ ಕಳೆದ ಫಬ್ರವರಿ ೦೭ ರಂದು ಸರ್ವೋದಯ ಕಾರ್ಯಕರ್ತರ ಚಿಂತನಾ ಸಭೆ ನಡೆಯಿತು. ಜನಪದ ಸೇವಾ ಟ್ರಸ್ಟ್‌ನ "ಹೊಸ ಜೀವನ ದಾರಿ" ಕೇಂದ್ರದಲ್ಲಿ ಸಭೆಯನ್ನು ಆಯೋಜಿಸಲಾಯಿತು. ರಾಜ್ಯಾದ್ಯಂತ ಇರುವ ಸುಮಾರು ೧೦೦ ಜನ ಸರ್ವೋದಯ ಕಾರ್ಯಕರ್ತರಲ್ಲಿ ಕೇವಲ ೨೬ ಜನ ಕಾರ್ಯಕರ್ತರು ಭಾಗವಹಿಸಿದ್ದರು. ಹಾಜರಾತಿಯ ಕೊರತೆ ಸರ್ವೋದಯ ಕಾರ್ಯಕರ್ತರಲ್ಲಿ ಇರಬಹುದಾದ ಉದಾಸೀನತೆಯನ್ನು ಎತ್ತಿತೋರಿಸುತ್ತಿದೆ. ಮುಂದಿನ ಸಭೆಗಳಲ್ಲಿ ಈ ರೀತಿ ಹಾಜರಾತಿಯ ಕೊರತೆ ಉಂಟಾಗದಂತೆ ಎಲ್ಲರೂ ಪ್ರಯತ್ನಿಸುವರೆಂದು ನಂಬಲಾಗಿದೆ. ಹಾಜರಿದ್ದ ಎಲ್ಲ ಸದಸ್ಯರು ಚಿಂತನಾ ಸಭೆಯಲ್ಲಿ ಸಕ್ರೀಯವಾಗಿ ಭಾಗವಹಿಸಿ ಪ್ರಚಲಿತ ವಿಷಯಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಕಾರ್ಯಕರ್ತರಲ್ಲಿರುವ ಕಳಕಳಿ ತೋರಿಸಿತು. ಪ್ರಾರಂಭದಲ್ಲಿ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯ ರಚನೆಯ ಉದ್ದೇಶದ ಬಗ್ಗೆ ರಾಜ್ಯಾದ್ಯಕ್ಷರು ಪರಿಚಯ ಮಾಡಿಕೊಟ್ಟರು. ನಂತರ ಕೆಲ ಜಿಲ್ಲಾದ್ಯಕ್ಷರು ಮತ್ತು ಕಾರ್ಯಕರ್ತರು ತಮ್ಮತಮ್ಮ ಕ್ಷೇತ್ರಗಳಲ್ಲಿಯ ಸಾಧನೆ ಮತ್ತು ತೊಡಕುಗಳ ಬಗ್ಗೆ ತಿಳಿಸಿದರು. ಯಾವ ಜಿಲ್ಲೆಗಳಲ್ಲಿ ಇನ್ನೂ ಅಧಿಕೃತವಾಗಿ ಸರ್ವೋದಯ ಮಿತ್ರ ಮಂಡಳಿಗಳ ರಚನೆಯಾಗಿಲ್ಲವೋ ಅಲ್ಲಿ ಆದಷ್ಟು ಬೇಗ ಮಂಡಳಿಗಳನ್ನು ರಚಿಸಲಾಗುವುದೆಂದು ಹೇಳಿದರು. ಚಿಂತನಾ ಸಭೆಯಲ್ಲಿ ಮುಖ್ಯವಾಗಿ ಎರಡು ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಒಂದು, ಸರ್ಕಾರ ಹಮ್ಮಿಕೊಂಡಿರುವ ಸ್ಮಾರ್ಟ್ ಸಿಟಿಗಳ ನಿರ್ಮಾಣ ಯೋಜನೆಯ ಸಾಧಕ-ಭಾದಕ; ಮತ್ತು ಎರಡನೆಯದು, ತಂತ್ರಜ್ಞಾನ ಮತ್ತು ವಿಜ್ಞಾನಗಳನ್ನು ಪ್ರಶ್ನಾತೀತವಾಗಿ ಒಪ್ಪಿಕೊಳ್ಳಬೇಕೇ ಎಂಬುದು.

ಇದಕ್ಕೂ ಮೊದಲು ಗಾಂಧಿ ವಿಚಾರದ ಪ್ರಚಾರ ಮತ್ತು ಸರ್ವೋದಯ ಆಂದೋಲನ ಇವುಗಳ ಮಧ್ಯೆ ಇರುವ ವ್ಯತ್ಯಾಸವನ್ನು ಗುರುತಿಸಲು ಪ್ರಯತ್ನಿಸಲಾಯಿತು. ಕೆಲ ಕಾರ್ಯಕರ್ತರು ತಾವು ಮಾಡುತ್ತಿರುವ ವಿವಿಧ ಸೇವೆಗಳ ಬಗ್ಗೆ ಹೇಳುತ್ತಾ ಅವು ಕೂಡ ಸರ್ವೋದಯ ಆಂದೋಲನದ ಕೆಲಸವಲ್ಲವೆ ಎಂಬ ಪ್ರಶ್ನೆಯನ್ನು ಮುಂದಿಟ್ಟರು. 'ಸೇವೆ' ಎಂಬುದು ತುಂಬಾ ಒಳ್ಳೆಯ ಕಾರ್ಯವೇ ಹೌದಾದರು ಅದರಿಂದ ಸಾಮಾಜಿಕ ಬದಲಾವಣೆ ತರಲು ಸಾಧ್ಯವಾಗದೆ ಇರುವುದರಿಂದ ಮತ್ತು ನಮ್ಮ ವಿಚಾರದ ಸರ್ವೋದಯ ಸಮಾಜದ ನಿರ್ಮಾಣ ಸಾಧ್ಯವಿಲ್ಲದೆ ಇರುವುದರಿಂದ ಸೇವಾ ಕಾರ್ಯದ ಜೊತೆಗೆ ಸಮಾಜ ಪರಿವರ್ತನೆಯ ಕೆಲಸವನ್ನು ಮಾಡವುದು ಅಗತ್ಯ ಎಂಬ ವಿಚಾರ ಮುನ್ನೆಲೆಗೆ ಬಂದಿತು. ಗಾಂಧೀಜಿ ಹೇಳಿದ ಅನೇಕ ವಿಚಾರಗಳನ್ನು ಇಂದು ಪ್ರಭುತ್ವ ಅಲ್ಲಗಳೆಯುತ್ತಿದೆ. ಆದ್ದರಿಂದ ಪ್ರಭುತ್ವದ ನೀತಿಗಳ ವಿರುದ್ಧ ಹೋರಾಟ ನಡೆಸುವ ಹಾಗು ಧ್ವನಿ ಎತ್ತುವ ಕೆಲಸವನ್ನು ಸರ್ವೋದಯ ಆಂದೋಲನ ಮಾಡಬೇಕಿದೆ. ಜಗತ್ತಿನಲ್ಲಿ ಹಿಂಸೆ, ಅಶಾಂತಿ, ತಾರತಮ್ಯತೆಗಳು ಹೆಚ್ಚಾಗುತ್ತಿರುವಾಗ ಅವುಗಳ ನಿವಾರಣೆಯ ಕೆಲಸ ಮಾಡುವ ಹೊಣೆ ಸರ್ವೋದಯ ಆಂದೋಲನದಾಗಿದೆ. ಅದಕ್ಕಾಗಿ ಗ್ರಾಮಗಳ ಹಂತದವರೆಗೆ ಸಂಘಟನೆಯನ್ನು ತಲುಪಿಸಬೇಕಿದೆ. ಎಂಬ ಅಭಿಪ್ರಾಯ ಮೂಡಿತು.

ಸ್ಮಾರ್ಟ್ ಸಿಟಿಗಳ ವಿಚಾರ ಪಶ್ಚಿಮದಿಂದ ಬಂದದ್ದು ಅದು ನಮ್ಮ ದೇಶದ ಪರಿಸ್ಥಿತಿಗೆ ಒಗ್ಗದೆ ಇರುವಂತದ್ದು ನಮ್ಮ ದೇಶದ ಜೀವನ ಪದ್ಧತಿ, ಹವಾಮಾನ, ಜನಸಂಖ್ಯೆ ಮುಂತಾದವುಗಳನ್ನು ಗಮನದಲ್ಲಿ ಇರಿಸಿಕೊಂಡು ಭಾರತ ಸ್ಪರ್ಶದ ಯೋಜನೆ ಸ್ಮಾರ್ಟ್ ಸಿಟಿಗಳದಾಗಬೇಕೆಂದು ಸಭೆ ಅಭಿಪ್ರಾಯ ಪಟ್ಟಿತ್ತು. ಆ ಯೋಜನೆಯಿಂದ ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭವೇ ವಿನಃ ನಮ್ಮ ದೇಶಕ್ಕಲ್ಲ. ಆದ್ದರಿಂದ ಸರ್ವೋದಯ ಕಾರ್ಯಕರ್ತರ ಈ ಚಿಂತನಾ ಸಭೆ ಸ್ಮಾರ್ಟ್ ಸಿಟಿಗಳ ಯೋಜನೆಯನ್ನು ಬಲವಾಗಿ ವಿರೋಧಿಸುತ್ತದೆ ಎಂದು ನಿರ್ಣಯ ಕೈಗೊಳ್ಳಲಾಯಿತು.

ತಂತ್ರಜ್ಞಾನ ಮತ್ತು ವಿಜ್ಞಾನವನ್ನು ಪ್ರಶ್ನಾತೀತವಾಗಿ ಒಪ್ಪಿಕೊಳ್ಳಬೇಕೇ ಎಂಬ ಬಗ್ಗೆ ಚರ್ಚೆನಡೆಯಿತು. ಆಧುನಿಕ ತಂತ್ರಜ್ಞಾನಗಳ ದುರುಪಯೋಗದ ಬಗ್ಗೆ ಎಲ್ಲರೂ ತಮ್ಮ ಚಿಂತೆಯನ್ನು ವ್ಯಕ್ತ ಪಡಿಸಿದರು. ಶಸ್ತ್ರಾಸ್ತ್ರಗಳ ನಿರ್ಮಾಣಕ್ಕೆ ತಂತ್ರಜ್ಞಾನ ಸಹಕಾರಿಯಾಗುತ್ತಿರುವ ವಿಷಾದ ವ್ಯಕ್ತಪಡಿಸಿದರು. ಈ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ಮತ್ತು ಚಿಂತನೆಯ ಅಗತ್ಯವಿದೆ. ಹಾಗೂ ಈ ವಿಷಯದಲ್ಲಿ ರಾಜನೀತಿಜ್ಞರ ಮತ್ತು ಸಮಚಿತ್ತದ ವಿಜ್ಞಾನಿಗಳ ಅಭಿಪ್ರಾಯವನ್ನು ಸಹ ತಿಳಿಯಬೇಕಾಗಿದದ್ದು ಅಗತ್ಯವಿದೆ ಎಂದು ಅಭಿಪ್ರಾಯ ಪಡಲಾಯಿತು.

ಆಂದೋಲನವನ್ನು ಬಲಪಡಿಸುವ ದೃಷ್ಠಿಯಿಂದ "ಸರ್ವೋದಯ ಸಮಾಜ ರಚನೆ" ಒಂದು ಚಿಂತನಾ ಸಭೆ ಎಂಬ ಹೆಸರಿನಲ್ಲಿ ಯುವಕರ ಶಿಬಿರಗಳನ್ನು ಏರ್ಪಡಿಸಬೇಕೆಂದು ತೀರ್ಮಾನಿಸಲಾಯಿತು. ಸಾಧ್ಯವಾದಲ್ಲಿ ಕರ್ನಾಟಕ ರಾಜ್ಯ ಸರ್ವೋದಯ ಸಮಾಜ ಸಮ್ಮೇಳನವನ್ನು ಏರ್ಪಡಿಸಲು ಪ್ರಯತ್ನಿಸಬೇಕೆಂಬ ಸಲಹೆ ಕೂಡಾ ಬಂತು.

ಚಿಂತನಾ ಸಭೆಯಲ್ಲಿ ವೆಂಕಟರಾಜು, ಲೀಲಾ ಶಿವಕುಮಾರ್, ಅಬಿದಾಬೇಗಂ, ಎನ್.ನರಸಿಂಹಯ್ಯ, ಎಚ್.ಎಸ್.ಸುರೇಶ್, ಯಶವಂತ್, ದೊರೆಸ್ವಾಮಿ, ಜ.ಹೋ.ನಾರಾಯಣಸ್ವಾಮಿ, ನಾಗಾನಂದ, ನಾಗಮಲ್ಲಪ್ಪ, ನರೇಂದ್ರ, ಎಚ್.ಎಸ್.ಶಿವಣ್ಣ, ಪಿರಿಯಾಪಟ್ಟಣ ಶಿವಣ್ಣ, ಎಮ್.ವಿ.ಧರಣೇಂದ್ರಯ್ಯ, ಸುರೇಂದ್ರ ಕೌಲಗಿ, ಮುಂತಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

**ವರದಿ:- ಡಾ ಟಟ ಹೆಚ್.ಎಸ್.ಸುರೇಶ್**

## ಮಹಿಳಾ ಶಿಬಿರ

ಫ್ರೆಬ್ರವರಿ ೨೦, ೨೧, ೨೨ ಈ ಮೂರು ದಿನ ಮಹರಾಷ್ಟ್ರದ ವಾರ್ದಾಜಿಲ್ಲೆಯ ಸೇವಾಗ್ರಾಮ ಆಶ್ರಮದಲ್ಲಿ ನಡೆಯಲಿರುವ ಅಖಿಲ ಭಾರತೀಯ ಸರ್ವೋದಯ ಮಹಿಳಾಶಿಬಿರದಲ್ಲಿ ಭಾಗವಹಿಸಲು ಕರ್ನಾಟಕದಿಂದ ಐದು ಜನ ಮಹಿಳೆಯರು ಹೋಗಿದ್ದಾರೆ ಅವರೆಲ್ಲರೂ ಸರ್ವೋದಯ ಮಿತ್ರರು. ಅವರ ಹೆಸರುಗಳು ಈ ಕೆಳಗಿನಂತಿವೆ:-

**೧) ಲೀಲಾಶಿವಕುಮಾರ್ ೨) ಮುನೀರ ಖಾನುಮ್ ೩) ಅಮುದಾ ಉಮೇಶ್ ೪) ಹೇಮಾವತಿ ೫) ಅಬಿದಾ ಬೇಗಂ**

ಅಲ್ಲದೇ ಎಮ್. ಶ್ರೀನಿವಾಸ್, ಶಿವಣ್ಣ, ಆನಂದ ಎಂಬುವವರು ಆಶ್ರಮದಲ್ಲಿ ಸ್ವಯಂ ಸೇವಕಾರಾಗಿ ಕೆಲಸಮಾಡಿ ಅನುಭವ ಪಡೆಯಲು ಹೋಗಿದ್ದಾರೆ.

# ಖಾದಿ ವಿಚಾರ



**ಕರ್ನಾಟಕ ಸರ್ವೋದಯ ಸಂಘ**

ಕಳೆದ ಫೆಬ್ರವರಿ ೨೦ನೇ ತಾರೀಕು ಕರ್ನಾಟಕ ಸರ್ವೋದಯ ಸಂಘದ ೫೭ನೇ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯಿತು. ಕರ್ನಾಟಕ ಸರ್ವೋದಯ ಸಂಘ ರಾಜ್ಯದ ಹಳೆಯ ಖಾದಿ ಸಂಸ್ಥೆಯಲ್ಲಿ ಒಂದು. ಕಳೆದ ೫೭ ವರ್ಷಗಳಿಂದ ಖಾದಿ ಕೆಲಸ ಮಾಡುತ್ತಾ ಬಂದಿದೆ. ಖಾದಿ ಆಯೋಗ ಮತ್ತು ಖಾದಿ ಮಂಡಳಿಯಿಂದ ಉತ್ತಮ ಸಂಸ್ಥೆ ಎಂದು ಹೆಸರು ಪಡೆದಿದೆ. ಸರ್ವಸದಸ್ಯರ ಸಭೆಯಲ್ಲಿ ೨೦೧೪-೧೫ನೇ ಸಾಲಿನ ಆಡಿಟೇಟ್ ಲೆಕ್ಕಪತ್ರಗಳನ್ನು, ಕಾರ್ಯವರದಿಯನ್ನು, ಬ್ಯಾಲೆನ್ಸ್ ಶೀಟ್ ಗಳನ್ನು ಸಭೆಯ ಮುಂದೆ ಮಂಡಿಸಿ ಒಪ್ಪಿಗೆಯನ್ನು ಪಡೆಯಲಾಯಿತು. ಕಳೆದ ವರ್ಷ ಆರು ಸಲ ಸಂಚಾಲಕ ಮಂಡಳಿಯ ಸಭೆ ಸೇರಿ ಸಂಘದ ಆಡಳಿತ ವ್ಯವಸ್ಥೆಯನ್ನು ನೋಡಿಕೊಂಡಿತು. ಸಭೆಯಲ್ಲಿ ೨೦೧೪-೧೫ನೇ ಸಾಲಿನಲ್ಲಿ ಆಗಿರುವ ಖಾದಿ ಉತ್ಪಾದನೆ, ಮಾರಾಟ ಮತ್ತು ಉದ್ಯೋಗ ಮಾಹಿತಿಯನ್ನು ಕೊಡಲಾಯಿತಲ್ಲದೆ ಅದರ ಹಿಂದಿನ ೨ ವರ್ಷಗಳ ಮಾಹಿತಿಯನ್ನು ಸಹ ಕೊಡಲಾಯಿತು. ಇದರಿಂದಾಗಿ ಸಂಘದ ಕೆಲಸದಲ್ಲಿ ಆಗಿದ್ದ ಏರಿಳಿತಗಳನ್ನು ತಿಳಿಯಬಹುದಾಗಿತ್ತು. ೨೦೧೪-೧೫ರಲ್ಲಿ ೩೬ ಸಾವಿರ ಚದರ ಮೀಟರ್ ಖಾದಿ ಉತ್ಪಾದನೆಯಾಗಿತ್ತು. ಅದೇ ಸಾಲಿನಲ್ಲಿ ೨೩.೩೧ ಲಕ್ಷ ರೂಪಾಯಿಗಳರಷ್ಟು ಖಾದಿ ವ್ಯಾಪಾರವಾಯಿತು. ೨೨೦ ಜನರಿಗೆ ಉದ್ಯೋಗ ಅವಕಾಶ ದೊರೆಯಿತು. ಖಾದಿ ಮಂಡಳಿಯಿಂದ ನೇಕಾರರಿಗೆ ಮತ್ತು ನೂಲುಗಾರರಿಗೆ ಬಂದ ೧೪,೫೧,೯೨೫ ರೂಪಾಯಿ ಪ್ರೋತ್ಸಾಹ ಧನವನ್ನು ಅವರಲೆಕ್ಕಕ್ಕೆ ಜಮಾ ಮಾಡಲಾಗಿದೆ.

ಕರ್ನಾಟಕ ಸರ್ವೋದಯ ಸಂಘಕ್ಕೆ ಎಲ್ಲಾ ಶುಭಾಷಯಗಳು.

* * *

**ಫೆಡರೇಶನ್**

ರಾಜ್ಯದಲ್ಲಿಯ ಖಾದಿಸಂಸ್ಥೆಗಳ ಒಕ್ಕೂಟ(ಖಾದಿ ಪೆಡೆರೇಶನ್) ದ ಸರ್ವಸದಸ್ಯರ ಸಭೆ ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ನಡೆಯಿತು. ಹೊಸ ಪದಾಧಿಕಾರಿಗಳ ಆಯ್ಕೆಯಾಗಬೇಕಿತ್ತು. ಆದರೆ ಸದಸ್ಯರುಗಳಲ್ಲಿಯ ಭಿನ್ನಾಭಿಪ್ರಾಯಗಳ ಕಾರಣದಿಂದಾಗಿ ಹೊಸ ಕಾರ್ಯಕಾರಿಣಿ ಸಮಿತಿ ರಚನೆಯಾಗಲಿಲ್ಲ. ಆದಷ್ಟು ಬೇಗ ಒಕ್ಕೂಟದಲ್ಲಿಯ ಭಿನ್ನಾಭಿಪ್ರಾಯ ಹೋಗಿ ಒಕ್ಕೂಟವು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವಂತಾಗಲೆಂದು ಖಾದಿ ಪ್ರೇಮಿಗಳು ಹಾರೈಸುತ್ತಾರೆ.

# ಜನಪದ ನಿಲಯದ ಅಂತರಂಗದಲ್ಲಿ – ೧೪೩



ಜನಪದ ನಿಲಯದ ಅಂತರಂಗ ಲೇಖನ ಮಾಲೆ ಈ ಕಂತಿನೊಂದಿಗೆ ಕೊನೆಗೊಳ್ಳುತ್ತದೆ. ಇದು ಅಂತಿಮ ಹಾಗು ಕೊನೆಯ ನೂರ ಹತ್ತಂಭೊತ್ತನೆಯ ಕಂತು. ಕಳೆದ ಹದಿನಾರು ವರ್ಷಗಳಿಂದ ತಿಂಗಳಿಗೆ ಒಂದರಂತೆ ಇದುವರೆಗೆ ನೂರ ನಲವತ್ತ ಎರಡು(೧೪೨) ಕಂತುಗಳು ಪ್ರಕಟವಾಗಬೇಕಿತ್ತು. ಆದರೆ ಅನಿವಾರ್ಯತೆಯಿಂದಾಗಿ ಕೆಲವೊಂದು ಪ್ರಕಟವಾಗದೇ ಇರಬಹುದು. ಅಂತರಂಗದ ಈ ಅಂಕಣ ಎರಡು ವಿಷಯಗಳ ಹೆಣಿಕೆಯಾಗಿದೆ. ಮೊದಲನೆಯದು ಸರ್ವೋದಯ ಸಿದ್ಧಾಂತವನ್ನು ಒಪ್ಪಿಕೊಂಡು ಕೆಲಸ ಮಾಡಿದ ಸಮಾಜಸೇವಕನ ಕೆಲ ಜೀವನನಾವುಭವವಾಗಿದ್ದರೆ. ಎರಡನೆಯದು ಸಮಾಜಸೇವೆಯ ಮಾದ್ಯಮವಾಗಿ ಜನಪದ ಸೇವಾ ಟ್ರಸ್ಟಿನ ಏರಿಳಿತಗಳ ವಿಷಯ. ಆದ್ದರಿಂದ ಏಕಕಾಲಕ್ಕೆ ಕೆಲ ಖಾಸಗಿ ವಿಚಾರಗಳು ಮತ್ತು ಸಾರ್ವಜನಿಕ ವಿಚಾರಗಳು ಅನಿವಾರ್ಯವಾಗಿ ಸೇರಿಕೊಂಡಿವೆ. ಆದ್ದರಿಂದ ಇದು ಜೀವನ ಚರಿತ್ರೆ ಅಲ್ಲ ಸಂಸ್ಥೆಯ ಇತಿಹಾಸವೂ ಅಲ್ಲ, ಟಿಪ್ಪಣಿಗಳನ್ನು ಇರಿಸಿಕೊಂಡು ಬರೆದ ಕಥನವಲ್ಲ. ನೆನಪಿನ ಆಧಾರದ ಮೇಲೆ ಬರೆದ ಕಥನ. ಸಾರ್ವಜನಿಕ ಸೇವೆಯ ಏಳುದಶಕಗಳ ಅನುಭವ ಕಲಸುಮೇಲೋಗರವಾಗಿದೆ. ಈ ಲೇಖನಮಾಲೆಯಿಂದ ಯಾವದೋ ಒಂದು ಉದ್ದೇಶ ನೆರವೇರಿದ್ದರೆ ಮತ್ತು ಸಾಮಾಜಿಕವಾಗಿ ಅದಕ್ಕೆ ಬೆಲೆ ಬಂದಿದ್ದರೆ ಅದೊಂದು ಆಕಸ್ಮಿಕ. ಅಂಕಣದ ಸಾಧಕಬಾಧಕಗಳು ಏನೆ ಆಗಿರಲಿ. ಅದನ್ನು ಪ್ರತಿ ತಿಂಗಳು ಆಸಕ್ತಿಯಿಂದ ಓದಿದ ಹಲವಾರು ಮಿತ್ರರು ಇದ್ದಾರೆ. ಪ್ರಕಟಗೊಳ್ಳದೇ ಇದ್ದಾಗ ಏಕೆ ಪ್ರಕಟಗೊಳ್ಳಲಿಲ್ಲ ಎಂದು ವಿಚಾರಿಸಿದವರೂ ಇದ್ದಾರೆ. ಇಂದಿಗೆ ಸುಮಾರು ಐವತ್ತೈದು ವರ್ಷಗಳ ಹಿಂದೆ ತೀರ ಅಪರಿಚಿತವೂ, ಪರಕೀಯವೂ ಆಗಿದ್ದ ಗ್ರಾಮದಲ್ಲಿ ಪೂರ್ವಯೋಜಿತ ಸಿದ್ದತೆಯಿಲ್ಲದೆ ಬಂದು ನೆಲಸಿದಾಗ ವ್ಯಕ್ತಿಶಃ ಯಾವುದೇ ಆದಾಯವಿರಲಿಲ್ಲ, ಯಾವುದೇ ನಿರ್ದಿಷ್ಟ ಜನಸಮುದಾಯದ ಬೆಂಬಲವಿರಲಿಲ್ಲ ಅಥವಾ ಯಾವುದೇ ಪ್ರಕಾರದ ರಾಜಕೀಯ ಬೆಂಬಲವಿರಲಿಲ್ಲ. ನಿವಾಸ ಮತ್ತು ಅಶನದ ಬಗ್ಗೆ ಅನಿಶ್ಚಿತತೆ ಇತ್ತು. ಇಂಥ ಅನಾಥ ಪರಿಸ್ಥಿತಿಯಲ್ಲಿಯೇ ಹುಟ್ಟಿಬಂದದ್ದು ಜನಪದ ಸೇವಾ ಟ್ರಸ್ಟ್, ಆದ್ದರಿಂದ ನಿಲಯದ ಅಂಕಣದ ಕೊನೆಯ ಈ ಕಂತಿನಲ್ಲಿ ನನ್ನ ಬದುಕು ಸಾಗುವಂತೆ ಮಾಡಿದ ಹಾಗು ಜನಪದ ಸೇವಾ ಟ್ರಸ್ಟ್ ಬೆಳೆಯಲು ಸಹಾಯ ಮಾಡಿದ ಮಹನಿಯರನ್ನು ನೆನೆಯುವುದು ಕರ್ತವ್ಯವೂ ಆಗುತ್ತದೆ,

ಧರ್ಮವೂಆಗುತ್ತದೆ. ಮೊಟ್ಟ ಮೊದಲು ನೆನೆಯಬೇಕಾದುದ್ದು ಟ್ರಸ್ಟ್ ಕಟ್ಟಲು ಸಹಾಯಮಾಡಿದ ಮಿತ್ರರಾದ ಪ್ರೊ ಬಿ. ಆರ್. ಪ್ರಾಣೇಶ್‌ರಾವ್, ಕೆ. ಎಸ್. ನಾರಾಯಣಸ್ವಾಮಿ, ಇವರ ಮಾರ್ಗದರ್ಶನವಿಲ್ಲದೇ ಹೋಗಿದ್ದರೆ ಟ್ರಸ್ಟ್ ಸ್ಥಾಪನೆಯಾಗುತ್ತಿರಲಿಲ್ಲ. ಆ ಕಾಲಕ್ಕೆ ಟ್ರಸ್ಟಿನ ಸದಸ್ಯರಾಗಿ ಬಂದವರು ಬಿ. ಕೆ. ಕೆಂಚೇಗೌಡ, ಎಸ್. ಪಟ್ಟಾಭಿರಾಮನ್, ಹೆಚ್. ಡಿ. ತುಳಸಿದಾಸ್, ಕೆ. ಮಾದೇಗೌಡ, ಪ. ಮಲ್ಲೇಶ್ ಮುಂತಾದವರು. ಎಲ್ಲ ಸದಸ್ಯರ ಪೂರ್ಣ ನಂಬಿಕೆ ಮತ್ತು ಸಹಕಾರ ದೊರೆತಿದ್ದರಿಂದ ಟ್ರಸ್ಟ್ ಬೆಳೆಯಲು ಸಹಾಯವಾಯಿತು. ನಂತರ ಸದಸ್ಯರಾದ ಎಸ್. ಪ್ರಾಣೇಶ್, ಕೆ. ಪ್ರಭಾಕರ್, ಎಸ್. ನಾರಾಯಣ್, ಇ. ಪಿ. ಮೆನನ್ ಮುಂತಾದವರ ಸಹಕಾರ ಗಣನೀಯವಾಗಿದೆ. ಟ್ರಸ್ಟ್ ಐವತ್ತೈದು ವರ್ಷಗಳನ್ನು ಪೂರೈಸಿ ಮುನ್ನಡೆಯುತ್ತಿರುವ ಸಮಯದಲ್ಲಿ ಅವರೆಲ್ಲರನ್ನು ಕೃತಜ್ಞತಾ ಭಾವನೆಯಿಂದ ನೆನೆಯುತ್ತೇನೆ. ಅದೇ ರೀತಿ ಮೇಲುಕೋಟೆಯನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಬಂದಾದ ಮೇಲೆ ಊಟದ ಮತ್ತು ವಸತಿಯ ಸೌಕರ್ಯವನ್ನು ಮಾಡಿಕೊಟ್ಟವರು ಭಾ. ವೆಂ. ರಾಘವಾಚಾರ್ಯ ಮತ್ತು ಅವರ ನೇತೃತ್ವದ ದಿವ್ಯದೇಶ ಜೀರ್ಣೋದ್ಧಾರಕ ಭಕ್ತ ಮಂಡಳಿ. ಹಲವಾರು ವರ್ಷ ಅವರು ಉಚಿತವಾಗಿ ಈ ಸೌಲಭ್ಯವನ್ನು ಕಲ್ಪಿಸಿಕೊಟ್ಟರು. ಶ್ರೀ ರಾಘವಾಚಾರ್ಯರ ಪರಿಚಯ ಮಾಡಿಕೊಟ್ಟವರು ಸರ್ವೋದಯವಿಚಾರದ ಕಾರ್ಯಕರ್ತರಾಗಿದ್ದ ಜಗ್ಗುನಾರಾಯಣ್. ಮೇಲುಕೋಟೆ ನೇಯ್ಗೆ ಕೈಗಾರಿಕೆಗೆ ಪ್ರಸಿದ್ಧವಾಗಿದ್ದಂಥ ಊರು. ಈಗ ಬದಲಾಗಿರುವ ಕಾಲಘಟ್ಟದಲ್ಲಿ ಕೈಮಗ್ಗ ಕೈಗಾರಿಕೆ ನಶಿಸಿಹೋಗಿದೆ. ನೂರಾರು ಮಗ್ಗಗಳಿದ್ದ ಸ್ಥಾನದಲ್ಲಿ ಈಗ ಹತ್ತಾರು ಮಗ್ಗಗಳಿರಬಹುದು. ಆಗ ಗ್ರಾಮದ ಸೇವೆಯ ಕೆಲಸವೆಂದರೆ ನೇಕಾರರ ಸಮಸ್ಯೆಗಳ ನಿವಾರಣೆಯೂ ಒಂದು ಆದ್ದರಿಂದ ನೇಕಾರರ ಸಂಪರ್ಕ ಮತ್ತು ನೇಯ್ಗೆ ಉದ್ಯಮದ ಪರಿಚಯ ಮಾಡಿಕೊಳ್ಳುವುದು ಮುಖ್ಯವಾಯಿತು. ಆ ಕಾಲದಲ್ಲಿ ಇದ್ದ ಕೆಲ ನೇಕಾರರ ಸಂಪರ್ಕ ಬಂದಿತು. ಅವರು ಎಲ್ಲ ರೀತಿಯಲ್ಲಿ ಸಹಕರಿಸಿದರು. ಮತ್ತು ನೇಕಾರರ ಸಂಘಟನೆ ಮಾಡಲು ಸಹಾಯ ಮಾಡಿದರು ಅಂಥವರಲ್ಲಿ ಎಂ. ವಿ. ವೆಂಕಟರಾಮು, ಎಸ್. ತಿಮ್ಮಯ್ಯ, ಲೋಕಯ್ಯ ಶೆಟ್ಟಿ, ಕರಿಶೆಟ್ಟಿ, ತಬಲ ಭೈರಶೆಟ್ಟಿ, ರಂಗಯ್ಯಶೆಟ್ಟಿ, ಬಂಗಾರಶೆಟ್ಟಿ, ಬಾಗಿಲಾಚೆ ನಾರಾಯಣಶೆಟ್ಟಿ, ಕರಡಿ ರಂಗಸ್ವಾಮಿ ಶೆಟ್ಟಿ ಮುಂತಾದವರು ಮತ್ತು ಟ್ರಸ್ಟಿನ ಕೆಲಸ ಕಾರ್ಯಗಳಲ್ಲಿ ಸಹಕರಿಸಿ ನಂತರ ಟ್ರಸ್ಟಿನ ಸದಸ್ಯರೂ ಆದವರು ಟಿ. ಎಲ್. ಭೈರಶೆಟ್ಟಿ. ಮೇಲುಕೋಟೆಯಲ್ಲಿ ನೆಲೆಸುವ ಮುನ್ನ ಒಂದು ಚಿಕ್ಕ ಗ್ರಾಮಸ್ಥರ ಸಭೆಯನ್ನು ಏರ್ಪಡಿಸಿ ಸಹಕಾರವನ್ನು ಕೋರಲಾಯಿತು ಅವರಲ್ಲಿ ಮುಖ್ಯರಾದವರು ಮ. ತಿ. ಕೃಷ್ಣ ಅಯ್ಯಂಗಾರ್, ಕಾಂಟ್ರ್ಯಾಕ್ಟ್ ರಾಮಸ್ವಾಮಿ ಅಯ್ಯಂಗಾರ್, ಬಿ. ವಿ. ರಾಮುನುಜ್, ಅನಂತನಾರಾಯಣ್ ಅಯ್ಯಂಗಾರ್, ಎಸ್ ಸಂಪತ್ತು ಇನ್ನು ಹಲವಾರು ಮಹನಿಯರು ಇದ್ದರು. ಅವರೆಲ್ಲರ ಪ್ರೀತಿ ಮತ್ತು ವಿಶ್ವಾಸದ ಸಹಾಯದಿಂದ

ಮೇಲುಕೋಟೆಯಲ್ಲಿ ನೆಲೆಸುವಂತಾಯಿತು ಮತ್ತು ಜನಪದ ಸೇವಾ ಟ್ರಸ್ಟ್ ಮೂಲಕ ಅಳಿಲು ಸಾರ್ವಜನಿಕ ಸೇವೆ ಮಾಡಲು ಸಾಧ್ಯವಾಯಿತು. ಮುಂದೆ ಮೇಲುಕೋಟೆಯವರೇ ಆದ ವರಕವಿ ಪು. ತಿ. ನರಸಿಂಹಾಚಾರ್ಯರ ಸಂಪರ್ಕ ಬಂದಿತು. ಅವರು ತುಂಬ ಆಸಕ್ತಿಯಿಂದ ನನ್ನ ವಿಷಯ ಕೇಳಿ ತಿಳಿದುಕೊಳ್ಳುತ್ತಿದ್ದರು. ನನ್ನ ಕೆಲಸವನ್ನು ಪ್ರೋತ್ಸಾಹಿಸುತ್ತಿದ್ದರು. ಅದೇ ಸಮಯಕ್ಕೆ ಸಂಪರ್ಕ ಬಂದಿದ್ದು ಸಮಾಜವಾದಿ ವಿಚಾರದ ಹಾಗು ಸರ್ವೋದಯ ವಿಚಾರದಿಂದ ಪ್ರಭಾವಿತರಾಗಿದ್ದ ಖಾದ್ರಿ ಶಾಮಣ್ಣ. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಮತ್ತು ನನ್ನೊಂದಿಗೆ ಭಕ್ತ ಮಂಡಳಿಯಲ್ಲಿ ಸಹಜೀವಿಯಾಗಿದ್ದ ಬಿ. ವಿ. ಸಂಪತ್ ಕುಮಾರ್ ಆಚಾರ್ಯರವರು ನನ್ನ ಕೆಲಸಕ್ಕೆ ಪ್ರೋತ್ಸಾಹ ಕೊಡುತ್ತಿದ್ದರು. ನನ್ನ ಸಂಪರ್ಕಕ್ಕೆ ಬಂದು ಆಗಾಗ್ಗೆ ನನ್ನ ಕೆಲಸದ ಬಗ್ಗೆ ಪ್ರೋತ್ಸಾಹಕರ ಮಾತನಾಡುತ್ತಿದ್ದ ಜೋಗಿಗೌಡ ಮತ್ತು ಜವಳಿ ಅಂಗಡಿ ಇಟ್ಟಿದ್ದ ಪುರಸಭೆಯ ಅಧ್ಯಕ್ಷರಾಗಿದ್ದ ಎಮ್. ಮಲ್ಲಶೆಟ್ಟಿ ಹಾಗು ಸೂರಪ್ಪ ಶೆಟ್ಟಿ ಅವರುಗಳನ್ನು ನೆನೆಯುವುದು ಕೂಡ ಮುಖ್ಯವಾಗುತ್ತದೆ. ಜನಪದ ಸೇವಾ ಟ್ರಸ್ಟಿನ ಮುಖ್ಯ ಕಾರ್ಯಕ್ರಮವಾಗಿದ್ದ ಅಂಗವಿಕಲರ ಸೇವಾಕಾರ್ಯಕ್ಕೆ ಹಳೆಯ ಮನೆಯೊಂದನ್ನು ಕಡಿಮೆ ಬಾಡಿಗೆಗೆ ಕೊಟ್ಟು ಸಹಕರಿಸಿದ ಶ್ರೀ ದೇಶಿಕರ ಸನ್ನಿಧಿಯ ರಾಮಸ್ವಾಮಿ ಅಯ್ಯಂಗಾರ್ ಅವರನ್ನು ನೆನೆಯಲೇ ಬೇಕು. ಏಕೆಂದರೆ ಆ ಮನೆಯನ್ನು ಟ್ರಸ್ಟಿಗೆ ಪರಕಾಲಮಠದಿಂದ ಖರೀದಿಗೆ ಕೊಡಿಸಿಕೊಟ್ಟು ಸಹಾಯಮಾಡಿದರು. ಅದರಂತೆಯೇ ಕಲ್ಯಾಣಿ ಬೀದಿಯಲ್ಲಿರುವ ದೊಡ್ಡ ಖಾಲಿ ಜಾಗವೊಂದನ್ನು ಟ್ರಸ್ಟಿಗೆ ಕೊಡಿಸಿಕೊಟ್ಟರು. ಶ್ರೀ ಬ್ರಹ್ಮತಂತ್ರ ಪರಕಾಲಮಠದ ಅಂದಿನ ಸ್ವಾಮೀಜಿಯವರಿಗೆ ಅನಂತ ಅನಂತ ಕೃತಜ್ಞತೆಗಳು ಸಲ್ಲಬೇಕು. ಮುಂದೆ ಕಾಲಕ್ರಮೇಣ ಪೆನಗೊಂಡೆ ದೇಶಿಕಾಚಾರ್ಯರು ಮತ್ತು ಅವರ ಪತ್ನಿ ಗುಂಡಮ್ಮ ತಮ್ಮ ಮನೆಯಲ್ಲಿ ಬಾಡಿಗೆಯ ಆಧಾರದ ಮೇಲೆ ಇರುವುದಕ್ಕೆ ಸ್ಥಳಾವಕಾಶ ಮಾಡಿಕೊಟ್ಟು ಸಹಾಯಮಾಡಿದರು. ನಂತರ ಅವರ ಸುಪುತ್ರ ಹಾಗು ಸಾಹಿತಿ ನರಸಿಂಹರಂಗನ್ (ಮನು) ಅವರು ತಮ್ಮೆಲ್ಲ ಬಂಧು ಬಾಂಧವರ ಒಪ್ಪಿಗೆಯ ಮೇರೆಗೆ ಆ ಮನೆಯನ್ನು ಟ್ರಸ್ಟಿಗೆ ಖರೀದಿಗೆ ಕೊಟ್ಟರು. ಆ ಮನೆಯೇ ಇಂದಿನ ಜನಪದ ನಿಲಯ. ಈ ನಿಲಯಕ್ಕೆ ಭೇಟಿಕೊಟ್ಟ ಮಹನೀಯರದು ದೊಡ್ಡ ಸಂಖ್ಯೆಯೇ ಇದೆ. ಅದರಲ್ಲಿ ಪ್ರಮುಖರಾದವರು ಆಚಾರ್ಯ ವಿನೋಬಾ ಭಾವೆ, ಮತ್ತು ಜಯಪ್ರಕಾಶ ನಾರಾಯಣ, ಇವರಲ್ಲದೇ ಅನೇಕ ಸರ್ವೋದಯ ನಾಯಕರು ಮತ್ತು ಕಾರ್ಯಕರ್ತರು ಭೇಟಿಕೊಟ್ಟು ಹೋಗಿದ್ದಾರೆ. ಕನ್ನಡದ ಅನೇಕ ಸಾಹಿತಿಗಳು ಕೂಡ ಬಂದು ಹೋಗಿದ್ದಾರೆ. ಇಂಥ ಸಹೃದಯರ ಸಹಾಯವಲ್ಲದೆ ರಾಜ್ಯದ ರಾಷ್ಟ್ರದ ಮತ್ತು ಬೇರೆ ರಾಷ್ಟ್ರಗಳ ಸಹೃದಯಿ ದಾನಿಗಳ ದಾನವನ್ನು ಮರೆಯಲಾಗದು. ಹನಿಹನಿಯಾಗಿ ಬಂದು ಸೇರುತ್ತಿದ್ದ ಧನಸಹಾಯ ಟ್ರಸ್ಟ್ ಅನ್ನು ಪೋಷಿಸಿ ಬೆಳೆಸಿದೆ. ಆ ಎಲ್ಲ ದಾನಿಗಳಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಜನಪದ ಸೇವಾ ಟ್ರಸ್ಟಿನ ಪರಿಚಯಪತ್ರಿಕೆ ಜನಪದ ವಿಚಾರವನ್ನು ಪ್ರೋತ್ಸಾಹಿಸಿದ ಚಂದಾದಾರರನ್ನು ನೆನೆಯಲೇ ಬೇಕು. ಈಗ ಟ್ರಸ್ಟಿನ ಅಧ್ಯಕ್ಷರಾದ ಜನಾರ್ದನ್ ಮತ್ತು ಹೆಚ್. ಎನ್. ರಮೇಶ್, ರೇಣುಕ, ಪ್ರವೀಣ, ಡಾ॥ ಮನೋಹರ್, ಸಂತೋಷ್ ಕೌಲಗಿ ಮುಂತಾದವರ ನೇತೃತ್ವದಲ್ಲಿ ಜನಪದ ಸೇವಾ ಟ್ರಸ್ಟ್ ಭವಿಷ್ಯದಲ್ಲಿ ಉತ್ತಮ ರೀತಿಯಲ್ಲಿ ಕೆಲಸಮಾಡಿಕೊಂಡು ಹೋಗುವುದೆಂದು ಆಶಿಸಲಾಗಿದೆ. ನನ್ನ ಸಾರ್ವಜನಿಕ ಕೆಲಸದಲ್ಲಿ ಹಾಗು ಟ್ರಸ್ಟಿನ ಬೆಳವಣಿಗೆಯಲ್ಲಿ ಸಹಾಯಮಾಡಿದ ಎಲ್ಲರನ್ನೂ, ಸಮಾಜ ಜನಾರ್ಧನನನ್ನೂ ಕೃತಜ್ಞತೆಯಿಂದ ನೆನೆಯುತ್ತಿರುವಾಗ ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರ ಕವನದ ಈ ಸಾಲುಗಳು ನೆನಪಾಗುತ್ತದೆ:-

**ಎನಿತು ಜನ್ಮದಲಿ**
**ಎನಿತು ಜೀವರಿಗೆ**
**ಎನಿತು ನಾವು ಋಣಿಯೋ**
**ತಿಳಿದು ನೋಡಿದರೆ ಬಾಳು ಎಂಬುದಿದು**
**ಋಣದ ರತ್ನ ಗಣಿಯೋ**

ಜನಪದ ಸೇವಾ ಟ್ರಸ್ಟ್‌ನ ಕಾರ್ಯಕ್ರಮಗಳ ಜೊತೆಗೆ ಕಳೆದ ೭ ವರ್ಷಗಳಿಂದ ಕರ್ನಾಟಕ ರಾಜ್ಯ ಸರ್ವೋದಯ ಮಂಡಳಿಯ ಅಧ್ಯಕ್ಷನಾಗಿಯೂ ಕೆಲಸ ಮಾಡಬೇಕಾಗಿ ಬಂದಿತು. ಸಂಘಟನೆಯ ಮತ್ತು ಹಣಕಾಸಿನ ಇತಿಮಿತಿಯೊಳಗೆಯೇ ಸಾಧ್ಯವಾದಷ್ಟು ರಾಜ್ಯದಲ್ಲಿ ಸರ್ವೋದಯ ಆಂದೋಲನವನ್ನು ಸಂಘಟಿಸಿಲು ಪ್ರಯತ್ನ ಮಾಡುವುದರ ಜೊತೆಗೆ ಮಂಡಲಿಯನ್ನು ಕ್ರೀಯಾಶೀಲವನ್ನಾಗಿ ಮಾಡಲು ಶ್ರದ್ಧೆಯಿಂದ ಪ್ರಯತ್ನಿಸಿದ್ದೇನೆ. ಆದರೂ ರಾಜ್ಯದಲ್ಲಿ ಸರ್ವೋದಯ ಆಂದೋಲನ ನಿರೀಕ್ಷಿಸಿದಷ್ಟು ಬೆಳೆಯದೆ ಇರುವುದಕ್ಕಾಗಿ ವಿಷಾದವಿದೆ. ಅಧ್ಯಕ್ಷತೆಯ ಸ್ಥಾನವನ್ನು ಬಿಟ್ಟು ಕೊಡಬೇಕೆಂದರೂ ಸಹ ಬೇರ ಯಾರೂ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಮುಂದೆ ಬರದೆ ಇರುವುದರಿಂದ ಅನಿವಾರ್ಯವಾಗಿ ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆಯ ಬೇಕಾಗಿ ಬಂದಿದೆ.

ಜನಪದ ಸೇವಾ ಟ್ರಸ್ಟ್‌ನ್ನು ಸ್ಥಾಪಿಸಿ ಸಾರ್ವಜನಿಕ ಕೆಲಸವನ್ನು ಪ್ರಾರಂಬಿಸಿದ್ದಾಗ ನನಗೆ ೨೬ ವಯಸ್ಸು ಆಗ ನನ್ನ ಪ್ರಾಪಂಚಿಕ ಸ್ಥಿತಿ ಹೇಗಿತ್ತೋ ಅದೇ ಸ್ಥಿತಿ ೫೫ ವರ್ಷಗಳ ಸೇವೆಯ ನಂತರವೂ ೮೩ ವಯಸ್ಸಿನಲ್ಲಿಯೂ ಇದೆ. ನನ್ನ ಹೆಸರಿನಲ್ಲಾಗಲಿ, ನನ್ನ ಪತ್ನಿಯ ಹೆಸರಿನಲ್ಲಾಗಲಿ, ಕುಟುಂಬದ ಸದಸ್ಯರ ಹೆಸರಲ್ಲಾಗಲಿ ಚರ ಮತ್ತು ಸ್ಥಿರ ಸ್ವತ್ತು ಇರುವುದಿಲ್ಲ. ಸಾರ್ವಜನಿಕ ಕಾರ್ಯಕರ್ತನಾದ್ದುದರಿಂದ ಈ ವಿಷಯವನ್ನು ಬಹಿರಂಗಪಡಿಸಬೇಕಿದೆ.

ಸಂಪರ್ಕಕ್ಕಾಗಿ : ೯೧೪೧೭೦೦೮೧೨

**ಎಲ್ಲರಿಗೂ ನಮಸ್ಕಾರ.**

# ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

**ನವೀಕರಿಸಿದ ಚಂದಾದಾರರು**

ಶ್ರೀಮತಿ ಬಿ. ಎಂ. ಗಂಗಾಂಬಿಕ – ಚಾಮರಾಜನಗರ

ಶ್ರೀ ಮಹಾದೇವಪ್ಪ, ಶ್ರೀ ಆನಂದರಾವ್ ಬಾಟ್ನಿ, ಶ್ರೀ ಪದ್ಮಪೂಜಾರಿ, – ಮೈಸೂರು

ಶ್ರೀ ಕೆ. ಯಶವಂತ್, ಡಾ॥ ಎ. ವೆಂಕಟೇಶ್, ಶ್ರೀ ಹರಿಕೃಷ್ಣ ಪುನರೂರು, ಶ್ರೀ ಎಮ್. ನಾಗರಾಜ್, ಶ್ರೀ ರಮಾನಾಥ್ ಕೊಟೇಕರ್, ಶ್ರೀ ಎಮ್. ಜಗದೀಶ ಶೆಟ್ಟಿ,

ಶ್ರೀ ಶುಭೋದಯ ಕೂಡ್ಲು, ಶ್ರೀ ಕೆ. ವಾಮನ್, – ಮಂಗಳೂರು

ಶ್ರೀ ಎನ್. ಜಗದೀಶ್, – ಧಾರವಾಡ;

ಶ್ರೀಮತಿ ಇಂದುಮತಿ ವಿಜಯೇಂದ್ರ, – ಚೆನ್ನೈ

ಶ್ರೀ ಮಂಜುನಾಥ್ ಭಟ್, – ಬೆಂಗಳೂರು

**ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು**

ಶ್ರೀ ಹೆಚ್. ಕೆ. ಸೂರ್ಯನಾರಾಯಣ, – ಹೆಗ್ಗೋಡು

ಡಾ॥ ಎಸ್. ಸತ್ಯನಾರಾಯಣ, ಶ್ರೀ ರೇವಣ್ಣ ಸಿದ್ದಪ್ಪ, – ಬೆಂಗಳೂರು

ಶ್ರೀ ಬಾ. ರಾ. ಸುಬ್ಬರಾಯ, – ಹೊಳೇನರಸೀಪುರ

ಶ್ರೀ ನಾಗಮಲ್ಲಪ್ಪ, – ಚಾಮರಾಜನಗರ

**ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು**

---

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820




MELKOTE

Prabha Venkatesh

ಶ್ರೀಮತಿ/ ಶ್ರೀ.....

363
ಶ್ರೀಮತಿ ಪ್ರಭಾವೆಂಕಟೇಶ್
#ಜಿ203 ಬ್ರೇನ ಅವಲೋನ
~~ದೊಡ್ಡ ನೆಕ್ಕುಂದಿ ಬಡಾವಣೆ~~
ಚೆನ್ನಾಪಟ್ಟಣ ಹಳ್ಳಿ ಮುಖ್ಯ
ರಸ್ತೆ ಬೆಂಗಳೂರು
-560 048
(ಬಾಸ್ಕೆಟ ವೇರ ಹೌಸ್
ಹತ್ತಿರ)

48

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237